| ಎ | ಹಾಸನ ಜಿಲ್ಲೆಯಲ್ಲಿ ಅನೇಕ ಸಿ.ಎಲ್.9 ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ಊಟ ಉಪಹಾರದ ವ್ಯವಸ್ಥೆಗಳಿರುವುದಿಲ್ಲ, ಶೌಚಾಲಯದ ವ್ಯವಸ್ಥೆಗಳು ಹಾಗೂ ಮೂಲ ಸೌಕರ್ಯಗಳಿಲ್ಲದಿದ್ದರೂ ಸಹ ನವೀಕರಣ ಮಾಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಂತಹ ಬಾರ್ ಅಂಡ್ ರೆಸ್ಟೋರೆಂಟ್ ಮಾಲೀಕರುಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಜಿಲ್ಲೆಯಲ್ಲಿ ಒಟ್ಟು 74 ಸಿಎಲ್-9 ಸನ್ನದುಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಸನ್ನದುಗಳ ನವೀಕರಣ ಸಮಯದಲ್ಲಿ ಕರ್ನಾಟಕ ಅಬಕಾರಿ (ದೇಶಿಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968ರ ಉಪ ನಿಯಮ 3(9) ರನ್ವಯ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿರುವ ಬಗ್ಗೆ ಪರಿಶೀಲಿಸಿ/ಖಚಿತಪಡಿಸಿಕೊಂಡು ನಂತರದಲ್ಲಿ ಸನ್ನದನ್ನು ನವೀಕರಿಸಲಾಗಿರುತ್ತದೆ.<br><br>ಸನ್ನದು ನವೀಕರಣಗೊಂಡ ನಂತರದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ನೀಡದೆ ಇರುವುದು ಕಂಡುಬಂದ ಹಿನ್ನೆಲೆಯಲ್ಲಿ ಸನ್ನದುದಾರರ ವಿರುದ್ಧ 2021-22ನೇ ಸಾಲಿನಲ್ಲಿ 79 ಮತ್ತು 2022-23ನೇ ಸಾಲಿನಲ್ಲಿ (ಜನವರಿ ಅಂತ್ಯದವರೆಗೆ) 44 ಮೊಕದ್ದಮೆಗಳನ್ನು ದಾಖಲಿಸಿ ಸನ್ನದುದಾರರಿಗೆ ಕಾರಣ ಕೇಳಿ ನೋಟೀಸ್‌ನ್ನು ನೀಡಲಾಗಿರುತ್ತದೆ |

**ಆಇ 01 ಇಎಲ್‌ಕ್ಯೂ 2023**

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು.

ಕೆ. ಗೋಪಾಲಯ್ಯ
ಅಬಕಾರಿ ಸಚಿವರು ಹಾಗೂ ಹಾಸನ ಮತ್ತು ಮಂಡ್ಯ
ಜಿಲ್ಲಾ ಉಸ್ತುವಾರಿ ಸಚಿವರು

# ಕರ್ನಾಟಕ ವಿಧಾನ ಸಭೆ

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 294 |
| 2. ಸದಸ್ಯರ ಹೆಸರು | : | ಬಾಲಕೃಷ್ಣ ಸಿ.ಎನ್ |
| 3. ಉತ್ತರಿಸುವ ದಿನಾಂಕ | : | 14.02.2023 |
| 4. ಉತ್ತರಿಸುವ ಸಚಿವರು | : | ಜಲಸಂಪನ್ಮೂಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
|---|---|---|
| ಅ) | ಕೇಂದ್ರ ಸರ್ಕಾರ 2022ರ ಆಯವ್ಯಯದಲ್ಲಿ ಗೋದಾವರಿ-ಕೃಷ್ಣ-ಪಾಲಾರ್-ಕಾವೇರಿ ನದಿಗಳ ಜೋಡಣೆ ಕುರಿತು ಘೋಷಿಸಿದ್ದು, ಈ ಕುರಿತು ಕೇಂದ್ರ ಜಲ ಶಕ್ತಿ ಮಂತ್ರಾಲಯ ಜಲಾನಯನ ರಾಜ್ಯಗಳೊಂದಿಗೆ ಸಭೆ ನಡೆಸಿದೆಯೇ; ಇದ್ದಲ್ಲಿ ಸಭೆಯ ವಿವರಗಳ ಸಂಕ್ಷಿಪ್ತ ಮಾಹಿತಿಯನ್ನು ನೀಡುವುದು; | ಕೇಂದ್ರ ಸರ್ಕಾರದ 2022ರ ಆಯವ್ಯಯದಲ್ಲಿ ನದಿ ಜೋಡಣೆ ಯೋಜನೆಗಳ ಕರಡು ಯೋಜನಾ ವರದಿಗಳು ಅಂತಿಮಗೊಂಡಿದ್ದು, ಇವುಗಳ ಬಗ್ಗೆ ಸಂಬಂಧಿಸಿದ ರಾಜ್ಯಗಳ ಒಮ್ಮತವಾದ ನಂತರ ಅನುಷ್ಠಾನಕ್ಕೆ ಕೇಂದ್ರವು ನೆರವು ನೀಡುವುದೆಂದು ತಿಳಿಸಲಾಗಿದೆ. ತದನಂತರ, ಕೇಂದ್ರ ಜಲ ಶಕ್ತಿ ಮಂತ್ರಾಲಯವು ಸಂಬಂಧಿಸಿದ ರಾಜ್ಯಗಳೊಂದಿಗೆ ಸಭೆ ನಡೆಸಿರುವುದಿಲ್ಲ. |
| ಆ) | ಗೋದಾವರಿ ನದಿಯಿಂದ 247 ಟಿ.ಎಂ.ಸಿ. ಪ್ರಮಾಣದ ನೀರನ್ನು ಸದರಿ ನದಿ ಜೋಡಣೆಯಲ್ಲಿ ಬಳಸಿಕೊಳ್ಳಲು ಉದ್ದೇಶಿಸಿದ್ದು, ಕರ್ನಾಟಕ ಕೃಷ್ಣ, ಪಾಲಾರ್ ಮತ್ತು ಕಾವೇರಿ ನದಿ ಪಾತ್ರಗಳಿಗೆ ನ್ಯಾಯಸಮ್ಮತ ಹಂಚಿಕೆಯ(ರೈಟ್‌ಫುಲ್ ಶೇರ್) ಪ್ರಮಾಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಗೋದಾವರಿ (ಇಂಚಂಪಲ್ಲಿ/ಜನಂಪೇಟೆ)-ಕಾವೇರಿ (ಗ್ರಾಂಡ್ ಅಣೆಕಟ್ಟು) ನದಿ ಜೋಡಣೆಯಡಿ 247 ಟಿಎಂಸಿ ನೀರಿನ ಪ್ರಮಾಣವನ್ನು ಕೃಷ್ಣಾ, ಕಾವೇರಿ ಹಾಗೂ ಪೆನ್ನಾರ್ ನದಿ ಕಣಿವೆಗಳಿಗೆ ತಿರುವುಗೊಳಿಸಲು ಯೋಜಿಸಲಾಗಿತ್ತು. ಸದರಿ ಯೋಜನೆಯನ್ನು ಡಿಸೆಂಬರ್ 2022ರಲ್ಲಿ ಪುನರ್ ವಿಮರ್ಶಿಸಲಾಗಿದ್ದು, ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯವತಿಯಿಂದ ಸಿದ್ಧಪಡಿಸಲಾಗಿರುವ ತಾಂತ್ರಿಕ ಸಾಧ್ಯತಾ ವರದಿಯಲ್ಲಿ ಪ್ರಸ್ತುತ 141 ಟಿಎಂಸಿ ನೀರಿನ ಪ್ರಮಾಣವನ್ನು ತಿರುವುಗೊಳಿಸಲು ಪ್ರಸ್ತಾಪಿಸಲಾಗಿರುತ್ತದೆ. ಇದಲ್ಲದೆ, ಸದರಿ ಹಂತದಡಿಯಲ್ಲಿ ಬೇಡ್ತಿ-ವರದ ನದಿ ಜೋಡಣೆಯಡಿ 18.50 ಟಿಎಂಸಿ ನೀರಿನ ಪ್ರಮಾಣವನ್ನು ತಿರುವುಗೊಳಿಸಲು ಪ್ರಸ್ತಾಪಿಸಲಾಗಿದೆ. |
| ಇ) | ಹಂಚಿಕೆಯಾಗದಿದ್ದಲ್ಲಿ, ಕರ್ನಾಟಕ ಸರ್ಕಾರ ನೀರಿನ ಹಂಚಿಕೆ ಪಡೆಯುವಲ್ಲಿ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಗೋದಾವರಿ(ಇಂಚಂಪಲ್ಲಿ/ಜನಂಪೇಟೆ)-ಕಾವೇರಿ(ಗ್ರಾಂಡ್ ಅಣೆಕಟ್ಟು) ನದಿ ಜೋಡಣೆಯ ಯೋಜನಾ ವರದಿಯ ಕುರಿತು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ಸಂಬಂಧಿಸಿದ ರಾಜ್ಯಗಳೊಂದಿಗೆ ಸಮಾಲೋಚನಾ ಸಭೆಗಳನ್ನು ನಡೆಸಿರುತ್ತದೆ. ಇದಲ್ಲದೇ, ಸದರಿ ವಿಷಯವು ನದಿ ಜೋಡಣೆ ವಿಶೇಷ ಸಮಿತಿಯ ಸಭೆಗಳಲ್ಲಿ ಹಾಗೂ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ ಆಡಳಿತ ಮಂಡಳಿಯ ಸಭೆಗಳಲ್ಲಿ ಚರ್ಚೆಯಾಗಿರುತ್ತದೆ.<br><br>ಗೋದಾವರಿ-ಕಾವೇರಿ ನದಿ ಜೋಡಣೆ ಯೋಜನೆಯೂ ಸೇರಿದಂತೆ ಪೆನೆನ್ನುಲಾರ್ ನದಿ ಅಭಿವೃದ್ಧಿ ಯೋಜನೆ ಅಡಿ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ರೂಪಿಸುತ್ತಿರುವ ನದಿ ಜೋಡಣೆ ಯೋಜನೆಗಳಲ್ಲಿ ರಾಜ್ಯಕ್ಕೆ ನ್ಯಾಯಸಮ್ಮತ ಪಾಲು ಹಂಚಿಕೆಯಾಗಬೇಕೆಂದು ಹಾಗೂ ಸದರಿ ವಿಷಯವು ಇತ್ಯರ್ಥವಾಗುವವರೆಗೆ ಯೋಜನಾ ವರದಿಗಳನ್ನು ಅಂತಿಮಗೊಳಿಸಬಾರದೆಂದು ರಾಜ್ಯವು ಕೇಂದ್ರ ಸರ್ಕಾರವನ್ನು ಹಾಗೂ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯನ್ನು ಒತ್ತಾಯಿಸುತ್ತಿದೆ. ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಬರೆಯಲಾಗಿರುವ ಪತ್ರಗಳಲ್ಲಿ ಒತ್ತಾಯಿಸಲಾಗಿದೆ. |

| | | |
|---|---|---|
| | | ಈ ಕುರಿತು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ದಿನಾಂಕ: 18.10.2022ರಂದು ಏರ್ಪಡಿಸಿದ 4ನೇ ಸಮಾಲೋಚನಾ ಸಭೆಯಲ್ಲಿಯೂ ಸಹ ರಾಜ್ಯದ ಅಭಿಪ್ರಾಯಗಳನ್ನು ಪುನರುಚ್ಚರಿಸಲಾಗಿದೆ.<br><br>ದಿನಾಂಕ: 13.12.2022ರಂದು ಜರುಗಿದ ನದಿ ಜೋಡಣೆಯ ವಿಶೇಷ ಸಮಿತಿಯ 20ನೇ ಸಭೆ ಹಾಗೂ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ 36ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ರಾಜ್ಯದ ಪರವಾಗಿ ನದಿ ಜೋಡಣೆ ಯೋಜನೆಗಳಿಂದ ರಾಜ್ಯಕ್ಕೆ ಲಭ್ಯವಾಗಬೇಕಾಗಿರುವ ನ್ಯಾಯಸಮ್ಮತ ಪಾಲನ್ನು ಹಂಚಿಕೆ ಮಾಡುವ ಬಗ್ಗೆ ಪ್ರತಿಪಾದಿಸಲಾಗಿದೆ. ಅಲ್ಲದೆ, ಗೋದಾವರಿ-ಕಾವೇರಿ ನದಿ ಜೋಡಣೆಯೊಂದಿಗೆ ಬೇಡ್ತಿ-ವರದ ನದಿ ಜೋಡಣೆಯನ್ನು ಸೇರ್ಪಡೆ ಮಾಡುವ ಬಗ್ಗೆ ರಾಜ್ಯದ ಸಹಮತಿ ಇಲ್ಲವೆಂದು ತಿಳಿಸಲಾಗಿದೆ.<br><br>ನದಿ ಜೋಡಣೆ ಯೋಜನೆಗಳಿಂದ ರಾಜ್ಯಕ್ಕೆ ಲಭ್ಯವಾಗಬೇಕಾಗಿರುವ ನ್ಯಾಯಸಮ್ಮತ ಪಾಲನ್ನು ಪಡೆಯಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸರ್ಕಾರವು ಬದ್ಧವಾಗಿದೆ. |

**ಸಂಖ್ಯೆ: ಜಸಂಇ 02 ಕೃವಿಇ 2023**

**(ಗೋವಿಂದ ಎಂ. ಕಾರಜೋಳ)**
ಜಲಸಂಪನ್ಮೂಲ ಸಚಿವರು

## ಕರ್ನಾಟಕ ವಿಧಾನ ಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 295 |
| ಸದಸ್ಯರ ಹೆಸರು | : | ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ) |
| ಉತ್ತರಿಸುವ ದಿನಾಂಕ | : | 14.02.2023. |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿ ರವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಹಾಸನ ತಾಲ್ಲೂಕು ಕಸಬಾ ಹೋಬಳಿ ದೊಡ್ಡಕೊಂಡಗುಳ ಬಾರೆ ಗ್ರಾಮದ ಸರ್ವೆ ನಂಬರ್ 238, 242ರಲ್ಲಿ 34, 33,7 ಗಳಲ್ಲಿ ಸುಮಾರು 100 ಎಕರೆಗೂ ಹೆಚ್ಚು ಜಮೀನುಗಳಲ್ಲಿ ಯಾವುದೇ ಇಲಾಖೆಗಳಿಂದ ಅನುಮತಿ/ಅನುಮೋದನೆ/ ನಿರಾಕ್ಷೇಪಣಾ ಪತ್ರಗಳನ್ನು ಪಡೆಯದೆ ಕಾನೂನುಬಾಹಿರವಾಗಿ ಬಡಾವಣೆಗಳನ್ನು ನಿರ್ಮಿಸಿ, ಸದರಿ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಉದ್ಯಾನವನ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರು ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ಭೂ ಮಾಫಿಯಾದವರು ಪಟ್ಟಭದ್ರ ಹಿತಾಸಕ್ತಿಗಳೊಂದಿಗೆ ಶಾಮೀಲಾಗಿ ಸಾರ್ವಜನಿಕರಿಂದ ಪ್ರತಿ ನಿವೇಶನಕ್ಕೆ ರೂ.10 ರಿಂದ ರೂ.20 ಲಕ್ಷಗಳಂತೆ ಪಡೆದು ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿಗಳ ನಷ್ಟವುಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)</td><td>ದೊಡ್ಡಕೊಂಡಗೊಳ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳಲ್ಲಿರುವ ಪ್ರದೇಶಗಳು ಸರ್ಕಾರಿ ಎಂದು ವರ್ಗೀಕರಿಸಿದ ಪ್ರದೇಶಗಳಾಗಿದ್ದು, ಈ ಪ್ರದೇಶಗಳನ್ನು ದೊಡ್ಡಕೊಂಡಗೊಳ ಬಾರೆ ಪ್ರದೇಶ ಎಂದು ಕರೆಯಲ್ಪಡುವ ಪ್ರದೇಶವಾಗಿರುತ್ತದೆ.<br>
<table>
<tr><th>ಸ.ನಂ</th><th>ಒಟ್ಟು ವಿಸ್ತೀರ್ಣ</th><th>ಮಂಜೂರಿ ವಿಸ್ತೀರ್ಣ</th><th>ಉಳಿಕೆ ವಿಸ್ತೀರ್ಣ</th></tr>
<tr><td>7 ದುರಸ್ತಿಯಾಗಿ ಹೊಸ ಸ.ನಂ.</td><td>30–19 ಗುಂಟೆ</td><td>24–34 ಗುಂಟೆ</td><td>5–23 ಎಕರೆ (ಸರ್ಕಾರಿ ಗೋಮಾಳ) 2–00 ಎಕರೆ (ಆಶ್ರಯ ನಿವೇಶನ)</td></tr>
<tr><td>32</td><td>27–08 ಗುಂಟೆ</td><td>26–38 ಗುಂಟೆ</td><td>–</td></tr>
<tr><td>33 ದುರಸ್ತಿಯಾಗಿ ಹೊಸ ಸ.ನಂ.242</td><td>17–11 ಗುಂಟೆ</td><td>13–05 ಗುಂಟೆ</td><td>5–16 ಗುಂಟೆ (ಸರ್ಕಾರಿ ಗೋಮಾಳ)</td></tr>
<tr><td>34</td><td>30–11 ಗುಂಟೆ</td><td>18–15 ಗುಂಟೆ</td><td>11–36 ಗುಂಟೆ (ಸರ್ಕಾರಿ ಗೋಮಾಳ)</td></tr>
</table>
<br>ಮೂಲತಃ ಸರ್ಕಾರಿ ಎಂದು ವರ್ಗೀಕರಿಸಲ್ಪಟ್ಟ ಮೇಲ್ಕಂಡ ಪ್ರದೇಶಗಳನ್ನು ವಿವಿಧ ಹಂತದಲ್ಲಿ ಮಂಜೂರಾತಿ ನೀಡಲಾಗಿದ್ದು, ಆದರೆ ಮಂಜೂರಿಯಂತೆ ಮೂಲ ಸರ್ವೆ ನಂಬರ್‌ಗಳಿಂದ ದುರಸ್ತಿಪಡಿಸಿ ಹೊಸ ಸರ್ವೆ ನಂಬರ್‌ಗಳನ್ನು ನೀಡದೇ ಇರುವುದರಿಂದ ಈ ಪ್ರದೇಶಕ್ಕೆ ಅನ್ಯ ಸಂಕ್ರಮಣ ಮಂಜೂರಾತಿ ನೀಡಲು ಅವಕಾಶವಿರುವುದಿಲ್ಲ ಹಾಗೂ ಹಾಲಿ ಈ ಪ್ರದೇಶವನ್ನು ಕೃಷಿ ಚಟುವಟಿಕೆಗೆ ಬಳಸಲಾಗುತ್ತಿದ್ದು, ಸ.ನಂ.7 ರಿಂದ ದುರಸ್ತಾಗಿ ಸ.ನಂ.238 ಹಾಗೂ ಸ.ನಂ.33 ರಿಂದ ದುರಸ್ತಾಗಿ ಸ.ನಂ.242 ಆಗಿರುತ್ತದೆ. ಯಾವುದೇ ರೀತಿಯ ನಿವೇಶನಗಳ ಬಡಾವಣೆಗಳಾಗಿರುವುದಿಲ್ಲ. ಹಾಗೂ ಯಾವುದೇ ಸ.ನಂ.ಗಳು ಅನ್ಯ ಸಂಕ್ರಮಣಗೊಂಡಿರುವುದಿಲ್ಲ.</td></tr>
</table>

| | | |
|---|---|---|
| | | ದೊಡ್ಡಕೊಂಡಗುಳ ಬಾರೆ ಗ್ರಾಮದ ಸರ್ವೆ ನಂಬರ್ 238, 242 ರಲ್ಲಿ 34, 33, 7 ರ ಸದರಿ ಪ್ರದೇಶವು ಸರ್ವೆ ನಂಬರ್ ಜಾಗಗಳಾಗಿದ್ದು, ಗ್ರಾಮ ಪಂಚಾಯತಿಗೆ ಸಂಬಂಧವಿಲ್ಲದ ಕಾರಣ ಹಾಗೂ ಸದರಿ ಸರ್ವೆ ನಂಬರ್‌ಗಳ ಜಾಗಕ್ಕೆ ಯಾವುದೇ ರೀತಿಯಾದ ಅನುಮತಿ ಪತ್ರ ಮತ್ತು ನಿರಾಕ್ಷೇಪಣೆ ಪತ್ರವನ್ನು ನೀಡಿರುವುದಿಲ್ಲ. |
| (ಆ) | ಇದೇ ರೀತಿ ಹಾಸನ ತಾಲ್ಲೂಕು ಚಿಕ್ಕಕೊಂಡಗುಳ ಗ್ರಾಮದಲ್ಲಿ ಸುಮಾರು 60 ಎಕರೆ ಸರ್ಕಾರಿ ಗೋಮಾಳ ಜಮೀನುಗಳಲ್ಲಿ ಹಾಗೂ ಹಂದಿನಕೆರೆ ಹರಳಹಳ್ಳಿ ಗ್ರಾಮದಲ್ಲಿ ಸುಮಾರು 70 ಎಕರೆ ಸರ್ಕಾರಿ ಗೋಮಾಳ ಜಮೀನುಗಳಲ್ಲಿ, ಕೆಲವು ಜಮೀನುಗಳಿಗೆ ತಾಲ್ಲೂಕು ಕಛೇರಿಯಲ್ಲಿ ದಾಖಲಾತಿಗಳಿಲ್ಲದಿದ್ದರೂ ಸಹ ಇಲಾಖೆಗಳ ನಿರಾಕ್ಷೇಪಣಾ ಪತ್ರಗಳನ್ನು ಪಡೆಯದೆ ಕಾನೂನುಬಾಹಿರವಾಗಿ ಬಡಾವಣೆಗಳನ್ನು ನಿರ್ಮಿಸಿ, ಸದರಿ ಬಡಾವಣೆಗಳಲ್ಲಿ ನಿಯಮಾನುಸಾರ ಆಟದ ಮೈದಾನ, ಉದ್ಯಾನವನ ಮತ್ತಿತರ ಮೂಲಭೂತ ಸಾಕರ್ಯಗಳನ್ನು ಕಲ್ಪಿಸದೆ ನಿವೇಶನಗಳನ್ನು ರಚಿಸಿ, ಜನರಿಂದ ಪ್ರತೀ ನಿವೇಶನಕ್ಕೆ ರೂ.10 ರಿಂದ ರೂ.20 ಲಕ್ಷಗಳಂತೆ ವಸೂಲಿ ಮಾಡಿ ಕೋಟ್ಯಾಂತರ ರೂಪಾಯಿಗಳ ಲಾಭ ಹೊಂದಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಚಿಕ್ಕಕೊಂಡಗೊಳ ಗ್ರಾಮದ ಸರ್ವೇ ನಂಬರ್ 7 ರಲ್ಲಿ 14.08 ಎಕರೆ, ಸ.ನಂ. 25 ರಲ್ಲಿ 16.19 ಎಕರೆ ಒಟ್ಟು ವಿಸ್ತೀರ್ಣವಿದ್ದು, ಈ ಪೈಕಿ ಸುಮಾರು ಸ.ನಂ. 7 ರಲ್ಲಿ 2.05 ಎಕರೆ ಹಾಗೂ 25 ರಲ್ಲಿ 2.15 ಎಕರೆ ಪ್ರದೇಶದಲ್ಲಿ ಅನ್ಯ ಸಂಕ್ರಮಣ ಮಂಜೂರಾತಿ ಪಡೆಯದೇ ಭೂಮಿಯನ್ನು ನಿವೇಶನವನ್ನಾಗಿ ಉಪಯೋಗಿಸಲು ಮುಂದಾಗಿರುವುದು ಕಸಬಾ ಹೋಬಳಿ ರಾಜಸ್ವ ನಿರೀಕ್ಷಕರ ದಿನಾಂಕ 26-12-2022 ರ ವರದಿಯಿಂದ ತಿಳಿದು ಬಂದಿರುತ್ತದೆ. ಅನ್ಯ ಸಂಕ್ರಮಣ ಮಂಜೂರಾತಿ ಪಡೆಯದೇ ಭೂಮಿಯನ್ನು ಅಭಿವೃದ್ಧಿ ಪಡಿಸುತ್ತಿರುವವರಿಗೆ ಭೂಕಂದಾಯ ಕಾಯ್ದೆ ಕಲಂ 96 ರನ್ವಯ ನೋಟೀಸ್ ಜಾರಿಗೊಳಿಸಲು ಕಸಬಾ ಹೋಬಳಿ ರಾಜಸ್ವ ನಿರೀಕ್ಷಕರಿಗೆ ಸೂಚಿಸಲಾಗಿರುತ್ತದೆ.<br><br>ಚಿಕ್ಕಕೊಂಡಗೊಳ ಗ್ರಾಮದ ಸ.ನಂ.7 ಹಾಗೂ 25 ರಲ್ಲಿ ಸುಮಾರು 2.05 ಹಾಗೂ 2.15 ಎಕರೆ ಪ್ರದೇಶ ಹೊರತುಪಡಿಸಿ ಇತರೆ ಯಾವುದೇ ಗ್ರಾಮಗಳಲ್ಲಿ ಅನ್ಯಸಂಕ್ರಮಣ ಪಡೆಯದೇ ನಿವೇಶನವನ್ನಾಗಿ ಪರಿವರ್ತಿಸಲು ಮುಂದಾಗಿರುವುದಿಲ್ಲ.<br><br>ಚಿಕ್ಕಕೊಂಡಗೊಳ ಗ್ರಾಮಕ್ಕೆ ಸಂಬಂಧಪಟ್ಟಂತೆ ಸುಮಾರು 60 ಎಕರೆ ಸರ್ಕಾರಿ ಗೋಮಾಳ ಜಾಗಕ್ಕೆ ಮತ್ತು ಹಂದಿನಕೆರೆ ಹರಳಹಳ್ಳಿ ಗ್ರಾಮದಲ್ಲಿ ಸುಮಾರು 70 ಎಕರೆ ಗೋಮಾಳ ಜಮೀನಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಂದ (ತೇಜೂರು ಮತ್ತು ಮಣಚನಹಳ್ಳಿ) ಸದರಿ ಸರ್ಕಾರಿ ಗೋಮಾಳ ಜಾಗಗಳಿಗೆ ಯಾವುದೇ ಅನುಮತಿ ಹಾಗೂ ನಿರಾಕ್ಷೇಪಣಾ ಪತ್ರಗಳನ್ನು ನೀಡಿರುವುದಿಲ್ಲ. |
| (ಇ) | ಹಾಸನ ನಗರದ ಸುತ್ತ-ಮುತ್ತ ನಗರಸಭೆಯ ಮತ್ತು ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಸುಮಾರು 1,000 ಎಕರೆಗೂ ಹೆಚ್ಚು ಜಮೀನುಗಳಲ್ಲಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು, ಭೂ ಮಾಫಿಯಾದವರೊಂದಿಗೆ ಮತ್ತು ಪಟ್ಟಭದ್ರ ಹಿತಾಸಕ್ತಿಗಳೊಂದಿಗೆ ಶಾಮೀಲಾಗಿ ಲೋಕೋಪಯೋಗಿ ರಸ್ತೆಯ ಅಕ್ಕ-ಪಕ್ಕದಲ್ಲಿ ಕಾನೂನುಬಾಹಿರವಾಗಿ ಬಡಾವಣೆಗಳನ್ನು ನಿರ್ಮಿಸಿ, ಸದರಿ ಬಡಾವಣೆಗಳಲ್ಲಿ ನಿಯಮಾನುಸಾರ ಆಟದ ಮೈದಾನ, ಉದ್ಯಾನವನ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೆ ನಿವೇಶನಗಳನ್ನು ರಚಿಸಿ, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ | ಒಂದು ವೇಳೆ ಬಡಾವಣೆಗಳಲ್ಲಿ ನಿಯಮಾನುಸಾರ ಆಟದ ಮೈದಾನ, ಉದ್ಯಾನವನ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೆ ನಿವೇಶನಗಳನ್ನು ರಚಿಸಿ, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟು ಮಾಡಿರುವ ಕುರಿತಂತೆ ಮಾಲೀಕರ ವಿರುದ್ಧ ವೈಯಕ್ತಿಕವಾಗಿ ಕ್ರಿಮಿನಲ್ ಪ್ರಕರಣ ದಾಖಲಿಸಬೇಕಾಗಿರುತ್ತದೆ.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 64 (5-ಎ) ರನ್ವಯ ಗ್ರಾಮ ಪಂಚಾಯತಿಗಳು ಕಟ್ಟಡದ ಲೈಸೆನ್ಸ್ ಅಥವಾ ವಸತಿ ಅಥವಾ ವಾಸ ಸ್ಥಳಗಳ ಲೇಔಟ್‌ಗಳ ಅನುಮೋದನೆಗಳನ್ನು ನೀಡುವ ವಿಷಯದಲ್ಲಿ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ರ ಉಪಬಂಧಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಯಾವುದೇ ಅನುಮೋದನೆಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ರ ಉಪಬಂಧಗಳ ಯಾವುದೇ |

| | | |
|---|---|---|
| | ನಷ್ಟವುಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಉಲ್ಲಂಘನೆಯು ದುರ್ನಡತೆ ಎಂದು ಅರ್ಥೈಸಿ ಸಂಬಂಧಪಟ್ಟ ಅಧಿಕಾರಿ ಅಥವಾ ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. |
| (ಈ) | ಹಾಗಿದ್ದಲ್ಲಿ, ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿ ಸಂಬಂಧಪಟ್ಟವರ ವಿರುದ್ದ ಕಾನೂನು ರೀತ್ಯಾ ಕ್ರಮ ಜರುಗಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಅನಧಿಕೃತ ಬಡಾವಣೆಗಳನ್ನು ತಡೆಗಟ್ಟಲು ಕಂದಾಯ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಗಳು ಕ್ರಮ ವಹಿಸಬೇಕಾಗಿರುತ್ತದೆ. |

ಸಂಖ್ಯೆ: ಗ್ರಾಅಪ 90 ಗ್ರಾಪಂಅ 2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

(14)

<u>ಕರ್ನಾಟಕ ವಿಧಾನ ಸಭೆ</u>

<u>15ನೇ ವಿಧಾನಸಭೆ</u>

<u>15ನೇ ಅಧಿವೇಶನ</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 296 |
| ಸದಸ್ಯರ ಹೆಸರು | : | ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ) |
| ~~ಉತ್ತರಿಸುವ ದಿನಾಂಕ~~ | : | ~~14-02-2023~~ |
| ಉತ್ತರಿಸುವವರು | : | ಮಾನ್ಯ ಮುಖ್ಯ ಮಂತ್ರಿಗಳು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | 15ನೇ ಹಣಕಾಸು ಯೋಜನೆ ಅಡಿಯಲ್ಲಿ ಹಾಸನ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆಗೆ ಬಾಕಿ ಇರುವ ಅನುದಾನವೆಷ್ಟು; (ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳವಾರು ಸಂಪೂರ್ಣ ಮಾಹಿತಿ ನೀಡುವುದು) | 15ನೇ ಹಣಕಾಸು ಯೋಜನೆ ಅಡಿಯಲ್ಲಿ ಹಾಸನ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ 2022-23ನೇ ಸಾಲಿನಲ್ಲಿ ಬಿಡುಗಡೆಗೆ ಬಾಕಿ ಇರುವ ಅನುದಾನದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಹಾಸನ ಜಿಲ್ಲೆಯ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗೆ ಜಿಲ್ಲಾ ಪಂಚಾಯತಿಯಿಂದ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಈಗಾಗಲೇ ಕಾಮಗಾರಿಗಳು ಭಾಗಶಃ ಪೂರ್ಣಗೊಂಡಿದ್ದರೂ ಸಹ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಆರ್ಥಿಕ ಇಲಾಖೆಯಿಂದ ಈವರೆವಿಗೂ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ 15ನೇ ಹಣಕಾಸು ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆಯಾಗದಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ಕೆಲವೊಂದು ಆಡಳಿತಾತ್ಮಕ ಕಾರಣಗಳಿಂದ ಚುನಾವಣೆಗಳನ್ನು ನಿಗಧಿತ ಅವಧಿಯಲ್ಲಿ ನಡೆಸಲು ಸಾಧ್ಯವಾಗಿರುವುದಿಲ್ಲ. ಈ ಕಾರಣಗಳಿಂದ ಕೇಂದ್ರ ಸರ್ಕಾರವು 15ನೇ ಹಣಕಾಸು ಯೋಜನೆಯಡಿ 2022-23ನೇ ಸಾಲಿನಲ್ಲಿ ಲಭ್ಯವಾಗಬೇಕಾಗಿದ್ದ ಅನುದಾನವನ್ನು ಬಿಡುಗಡೆಗೊಳಿಸಿರುವುದಿಲ್ಲ. ಈ ಸಂಬಂಧವಾಗಿ ಪ್ರಸ್ತುತ ಇರುವ ಸಮಸ್ಯೆಗಳನ್ನು ವಿವರಿಸಿ ಕೇಂದ್ರ ಸರ್ಕಾರಕ್ಕೆ ದಿನಾಂಕ:19-08-2022 ರಂದು ಅರೆ ಸರ್ಕಾರಿ ಪತ್ರ ಬರೆದು ತ್ವರಿತವಾಗಿ ಅನುದಾನವನ್ನು ಬಿಡುಗಡೆಗೊಳಿಸುವಂತೆ ಕೋರಲಾಗಿರುತ್ತದೆ. ಅನುದಾನ ಬಿಡುಗಡೆಯಾದ ನಂತರ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. |

ಸಂಖ್ಯೆ:ಗ್ರಾಅಪಂರಾ 55 ಜಿಪಸ 2023

(ಬಸವರಾಜ ಬೊಮ್ಮಾಯಿ)

ಮುಖ್ಯ ಮಂತ್ರಿ

# ಅನುಬಂಧ

## 2022-23ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗೆ 15ನೇ ಹಣಕಾಸು ಯೋಜನೆಯಡಿ ಬಿಡುಗಡೆಗೆ ಬಾಕಿ ಇರುವ ಅನುದಾನದ ವಿವರ

| ಕ್ರ. ಸಂ | ಜಿಲ್ಲೆ | ನಿರ್ಬಂಧಿತ ಅನುದಾನ | ಅನಿರ್ಬಂಧಿತ ಅನುದಾನ | ಒಟ್ಟು |
|---|---|---|---|---|
| 1 | ಹಾಸನ ಜಿಲ್ಲೆ | 28499563 | 18999709 | 47499272 |

## 2022-23ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತಿಗೆ 15ನೇ ಹಣಕಾಸು ಯೋಜನೆಯಡಿ ಬಿಡುಗಡೆಗೆ ಬಾಕಿ ಇರುವ ಅನುದಾನದ ವಿವರ

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ನಿರ್ಬಂಧಿತ ಅನುದಾನ | ಅನಿರ್ಬಂಧಿತ ಅನುದಾನ | ಒಟ್ಟು |
|---|---|---|---|---|---|
| 1 | ಹಾಸನ ಜಿಲ್ಲೆ | ಆಲೂರು | 3136018 | 2090679 | 5226697 |
| | | ಅರಕಲಗೂಡು | 7206961 | 4804640 | 12011601 |
| | | ಅರಸೀಕೆರೆ | 10330322 | 6886881 | 17217203 |
| | | ಬೇಲೂರು | 6432405 | 4288270 | 10720676 |
| | | ಚನ್ನರಾಯಪಟ್ಟಣ | 9419151 | 6279434 | 15698584 |
| | | ಹಾಸನ | 10063475 | 6708983 | 16772458 |
| | | ಹೊಳೆನರಸೀಪುರ | 5910543 | 3940362 | 9850904 |
| | | ಸಕಲೇಶಪುರ | 4568237 | 3045491 | 7613728 |

# ಕರ್ನಾಟಕ ವಿಧಾನಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 297 |
| ಸದಸ್ಯರ ಹೆಸರು | ಶ್ರೀ.ಹೆಚ್.ಡಿ.ರೇವಣ್ಣ (ಹೊಳೇನರಸೀಪುರ) |
| ಉತ್ತರಿಸಬೇಕಾದ ದಿನಾಂಕ | 14.02.2023 |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2022-23ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ:5054ಅಡಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳು ಪೂರ್ಣಗೊಂಡು, ನವೆಂಬರ್ 202ನೇ ತಿಂಗಳಲ್ಲಿ ಬಿಲ್ಲುಗಳನ್ನು ಸಲ್ಲಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸಂಪೂರ್ಣ ಮಾಹಿತಿ ನೀಡುವುದು | ಬಂದಿದೆ.<br><br>ಲೆಕ್ಕಶೀರ್ಷಿಕೆ:5054ರಡಿ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ 300 ರಸ್ತೆ ಕಾಮಗಾರಿಗಳಲ್ಲಿ ಬಾಕಿ ಇರುವ 254 ರಸ್ತೆ ಕಾಮಗಾರಿಗಳ ಬಾಬ್ತು ಸರ್ಕಾರದ ಆದೇಶ ಸಂ.ಗ್ರಾಅಪ/394-672(ಆರ್ಆರ್ಸಿ)/2022 ಬೆಂಗಳೂರು ದಿನಾಂಕ:19.01.2023ರಲ್ಲಿ ರೂ.1300.20ಲಕ್ಷಗಳು ಮತ್ತು 200 ರಸ್ತೆ ಕಾಮಗಾರಿಗಳ ಬಾಬ್ತು ಸರ್ಕಾರದ ಆದೇಶ ಸಂ.ಗ್ರಾಅಪ/394-840(ಆರ್ಆರ್ಸಿ)/2022 ಬೆಂಗಳೂರು ದಿನಾಂಕ:06.02.2023ರಲ್ಲಿ ರೂ.1000.00 ಲಕ್ಷಗಳು ಬಿಡುಗಡೆ ಮಾಡಲಾಗಿದೆ. |
| ಆ. | ಹಾಗಿದ್ದಲ್ಲಿ ಈ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2022-23ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ:5054 ಅಡಿಯಲ್ಲಿನ ಕಾಮಗಾರಿಗಳಿಗೆ ಈವರೆಗೆ ಹಣ ಪಾವತಿಸದೇ ಇರಲು ಕಾರಣಗಳೇನು; ಯಾವ ಕಾಲಮಿತಿಯೊಳಗೆ ಹಣವನ್ನು ಪಾವತಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಹಾಸನ ಜಿಲ್ಲಾ ಪಂಚಾಯತ್‌ನ ಖಜಾನೆ-2 ರಲ್ಲಿ ದಿನಾಂಕ:02.02.2023ರಂದು ರೂ. 1300.20ಲಕ್ಷಗಳು ಬಿಡುಗಡೆಯಾಗಿದ್ದು, ಡಿ.ಎಸ್.ಸಿ. ಮುಂತಾದ ತಾಂತ್ರಿಕ ಕಾರಣಗಳಿಂದ ದಿನಾಂಕ:08.02.2023ರಂದು ತತ್ಸಂಬಂಧಿ ಪಿ.ಆರ್.ಇ.ಡಿ. ವಿಭಾಗಕ್ಕೆ ಮರು ಬಿಡುಗಡೆ ಮಾಡಿರುತ್ತಾರೆ. 200 ರಸ್ತೆ ಕಾಮಗಾರಿಗಳ ಬಾಬ್ತು ಸರ್ಕಾರದ ಆದೇಶ ಸಂ.ಗ್ರಾಅಪ/394-840(ಆರ್ಆರ್ಸಿ) / 2022 ಬೆಂಗಳೂರು ದಿನಾಂಕ:06.02.2023ರಲ್ಲಿ ರೂ.1000.00ಲಕ್ಷಗಳು ಬಿಡುಗಡೆ ಮಾಡಲಾಗಿದ್ದು, ಹಾಸನ ಜಿಲ್ಲಾ ಪಂಚಾಯತ್‌ನಿಂದ ಪಿ.ಆರ್.ಇ.ಡಿ. ವಿಭಾಗಗಳಿಗೆ ಮರು ಬಿಡುಗಡೆಗೆ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ:ಗ್ರಾಅಪ:ಆರ್ಆರ್ಸಿ:15ನೇ ವಿಸ:15ಅ:ಚುರಪ:297:2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 298

ಸದಸ್ಯರ ಹೆಸರು : ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)

ಉತ್ತರಿಸ ಬೇಕಾದ ದಿನಾಂಕ : 14.02.2023

ಉತ್ತರಿಸ ಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ಪುರಸಭೆ ವ್ಯಾಪ್ತಿಯ ವಾರ್ಡ್‌ಗಳಲ್ಲಿ ವಿವಿಧ ಕಾಮಗಾರಿಗಳಿಗಾಗಿ 2019ನೇ ಸಾಲಿನಲ್ಲಿ ಎಸ್.ಎಫ್.ಸಿ ಹಾಗೂ ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಅನುದಾನದಡಿಯಲ್ಲಿ 18.00 ಕೋಟಿ ರೂಗಳನ್ನು ಮಂಜೂರು ಮಾಡಲಾಗಿರುವುದು ನಿಜವೇ; ಸದರಿ ಅನುದಾನದಲ್ಲಿ ಇದುವರೆವಿಗೂ ಕೇವಲ 5.50 ಕೋಟಿ ರೂಗಳನ್ನು ಮಾತ್ರ ಬಿಡುಗಡೆಗೊಳಿಸಿದ್ದು, ಇನ್ನೂ ರೂ.12.50 ಕೋಟಿ ರೂಗಳನ್ನು ಬಿಡುಗಡೆಗೊಳಿಸದೇ ಇರಲು ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು | • ಹೊಳೇನರಸೀಪುರ ವಿಧಾನಸಭಾ ಕ್ಷೇತ್ರದ ಪುರಸಭೆಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 145 ಎಸ್.ಎಫ್.ಸಿ 2018, ದಿನಾಂಕ:19.11.2018 ರನ್ವಯ ರೂ.10.00 ಕೋಟಿಗಳನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ನಅಇ 03 ಎಸ್.ಎಫ್.ಸಿ 2019 ದಿನಾಂಕ:09-01-2019 ರನ್ವಯ ರೂ.8.00 ಕೋಟಿಗಳನ್ನು ಒಟ್ಟು ರೂ.18.00 ಕೋಟಿಗಳ ಎಸ್.ಎಫ್.ಸಿ ವಿಶೇಷ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.<br>• ಮಂಜೂರಾದ ಅನುದಾನದ ರೂ.18.00 ಕೋಟಿಗಳ ಬಿಡುಗಡೆಗೆ ಸಂಬಂಧಿಸಿದಂತೆ ಮೊದಲ ಹಂತದಲ್ಲಿ ಆದೇಶ ಸಂಖ್ಯೆ:ನಅಇ 184 ಎಸ್.ಎಫ್.ಸಿ. 2022 ದಿನಾಂಕ:12.08.2022 ರನ್ವಯ ರೂ.569.00 ಲಕ್ಷಗಳನ್ನು ಹಾಗೂ ಎರಡನೇ ಹಂತದಲ್ಲಿ ಸರ್ಕಾರದ ಆದೇಶದ ಸಂಖ್ಯೆ:ನಅಇ 243 ಎಸ್.ಎಫ್.ಸಿ. 2022, ದಿನಾಂಕ:14.11.2022 ರನ್ವಯ ರೂ.580.74 ಲಕ್ಷಗಳಂತೆ ಒಟ್ಟು ರೂ.1149.74 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |
| ಆ) | ಹಾಗಿದ್ದಲ್ಲಿ, ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುವುದರಿಂದ ಬಿಡುಗಡೆಗೆ ಬಾಕಿ ಇರುವ ಎಸ್.ಎಫ್.ಸಿ. ಯೋಜನೆಯಡಿಯಲ್ಲಿ 12.50 ಕೋಟಿ ರೂ.ಗಳನ್ನು ಕೂಡಲೇ ಬಿಡುಗಡೆಗೊಳಿಸಲು ಸರ್ಕಾರ ಕ್ರಮ ವಹಿಸುವುದೇ (ಸಂಪೂರ್ಣ ಮಾಹಿತಿ | • ಮಂಜೂರಾದ ಅನುದಾನದ ಪೈಕಿ ಬಿಡುಗಡೆಗೆ ಬಾಕಿ ಇರುವ ಅನುದಾನ ರೂ.650.26 ಲಕ್ಷಗಳಿಗೆ ಸಂಬಂಧಿಸಿದಂತೆ ಈಗಾಗಲೇ ಬಿಡುಗಡೆಯಾದ ಅನುದಾನವನ್ನು ವೆಚ್ಚಗೊಳಿಸಿರುವ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರದೊಂದಿಗೆ ಮಾರ್ಗಸೂಚಿಯನ್ವಯ ಪ್ರಸ್ತಾವನೆಯು ಸ್ವೀಕೃತವಾದಲ್ಲಿ ಮಂಜೂರಾದ ಕಾಮಗಾರಿಗಳಿಗೆ ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಗಳ ಪ್ರಗತಿಗನುಗುಣವಾಗಿ ಅನುದಾನ ಕೋರಿ ಪ್ರಸ್ತಾವನೆ ಸ್ವೀಕೃತವಾದಲ್ಲಿ ಅನುದಾನ |

| | | |
|---|---|---|
| | ನೀಡುವುದು) | ಲಭ್ಯತೆಗನಗುಣವಾಗಿ ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು. |
| ಇ) | ಹೊಳೆನರಸೀಪುರ ಪಟ್ಟಣದ ಒಳಚರಂಡಿ ವ್ಯವಸ್ಥೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ೯೦.೦೦ ಕೋಟಿ ರೂ.ಗಳ ಪ್ರಸ್ತಾವನೆಯು ಆರ್ಥಿಕ ಇಲಾಖೆಯಲ್ಲಿ ಬಾಕಿ ಇರುವುದು ನಿಜವೇ; ಹಾಗಿದ್ದಲ್ಲಿ, ಈ ಅನುದಾನವನ್ನು ಆರ್ಥಿಕ ಇಲಾಖೆಯಿಂದ ಯಾವ ಕಾಲಮಿತಿಯೊಳಗೆ ಬಿಡುಗಡೆಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಹೊಳೆನರಸೀಪುರ ಪಟ್ಟಣದ ಒಳಚರಂಡಿ ವ್ಯವಸ್ಥೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ರೂ.೯೦.೦೦ ಕೋಟಿಗಳ ಪ್ರಸ್ತಾವನೆಯು ಆರ್ಥಿಕ ಇಲಾಖೆಯಲ್ಲಿ ಸ್ವೀಕೃತಗೊಂಡಿದ್ದು, ಕಡತ ಸಂಖ್ಯೆ:ಆಇ 577 ವೆಚ್ಚ-೯/2022 ರನ್ವಯ ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುತ್ತದೆ. ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅಗತ್ಯತೆ ಮತ್ತು ಅನುದಾನದ ಲಭ್ಯತೆಯನುಸಾರ ಹಂತ ಹಂತವಾಗಿ ಪ್ರಸ್ತಾವನೆಯನ್ನು ಪರಿಗಣಿಸುವ ಕುರಿತು ಪರಿಶೀಲಿಸಲಾಗುವುದು. |

ಸಂಖ್ಯೆ: ಆಇ 139 ವೆಚ್ಚ-9/2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನ ಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 299 |
| ಸದಸ್ಯರ ಹೆಸರು | : | ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ) |
| ಉತ್ತರಿಸಬೇಕಾದ ದಿನಾಂಕ | : | 14-02-2023. |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಹೊಳೆನರಸೀಪುಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿರುವ ಮದೀನ ಮಸೀದಿ. ದೊಡ್ಡಮಸೀದಿ ಬೀದಿಯಲ್ಲಿರುವ ಜಾಮಿಯಾ ಮಸೀದಿ ಮತ್ತು ಲಷ್ಕರ್ ಮೊಹಲ್ಲಾದಲ್ಲಿರುವ ಜುಮ್ಮಾ ಮಸೀದಿಗಳ ಅಭಿವೃದ್ಧಿಗಾಗಿ ಅನುದಾನವನ್ನು ಬಿಡುಗಡೆಗೊಳಸುವಂತೆ ಸ್ಥಳೀಯ ಶಾಸಕರು ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುವುದು ನಿಜವೇ: ಮಾನ್ಯ ಮುಖ್ಯ ಮಂತ್ರಿಯವರು ಸದರಿ ಪತ್ರದ ಮೇಲೆ "ಕಡತ ಮಂಡಿಸಿ" ಎಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ನಿರ್ದೇಶನ ನೀಡಿರುವುದು ನಿಜವೇ: (ಸಂಪೂರ್ಣ ಮಾಹಿತಿ ನೀಡುವುದು) | ಹೌದು, ಮಾನ್ಯ ಮಾಜಿ ಪ್ರಧಾನ ಮಂತ್ರಿಗಳು ಮತ್ತು ರಾಜ್ಯ ಸಭಾ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಪತ್ರದಲ್ಲಿ ಹಾಸನ ಜಿಲ್ಲೆ, ಹೊಳೆನರಸೀಪುರ ಪಟ್ಟಣದ ಹೊಳೆ ಬೀದಿಯಲ್ಲಿ ಟಿಪ್ಪು ಶಾದಿಮಹಲ್ ಅಭಿವೃದ್ಧಿ ಕಾಮಗಾರಿಗೆ, ಹೊಳೆನರಸೀಪುರ ಪಟ್ಟಣದ ಬಸವಗುಡಿ ಬೀದಿಯಲ್ಲಿ ಜೈನಬಿಯ ಶಾದಿಮಹಲ್ ಅಭಿವೃದ್ಧಿ ಕಾಮಗಾರಿಗೆ ಹಾಗೂ ಹೊಳೆನರಸೀಪುರ ಪಟ್ಟಣ ಹೌಸಿಂಗ್ ಬೋರ್ಡ್‌ನಲ್ಲಿರುವ ಮದೀನ ಮಸೀದಿಯ ಅಭಿವೃದ್ಧಿ ಕಾಮಗಾರಿಗೆ ಒಟ್ಟು ರೂ.150.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. |
| ಆ | ಮಾನ್ಯ ಮುಖ್ಯ ಮಂತ್ರಿಯವರು ನಿರ್ದೇಶನ ನೀಡಿದ್ದರ ಮೇರೆಗೆ ಕಡತವು ಪ್ರಸ್ತುತ ಆರ್ಥಿಕ ಇಲಾಖೆಯಲ್ಲಿ ಬಾಕಿ ಇರುವುದಾಗಿ ತಿಳದುಬಂದಿದ್ದು. ಆರ್ಥಿಕ ಇಲಾಖೆಯಿಂದ ಸದರಿ ಅನುದಾನವನ್ನು ಬಿಡುಗಡೆಗೊಳಸಲು ಕ್ರಮ ಕೈಗೊಳ್ಳಲಾಗುವುದೇ: ಸದರಿ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: MWD 58 MDS 2023, ದಿನಾಂಕ: 10-02-2023 ರಲ್ಲಿ ಹಾಸನ ಜಿಲ್ಲೆ, ಹೊಳೆನರಸೀಪುರ ಪಟ್ಟಣದ ಹೊಳೆ ಬೀದಿಯಲ್ಲಿ ಟಿಪ್ಪು ಶಾದಿಮಹಲ್ ಅಭಿವೃದ್ಧಿ ಕಾಮಗಾರಿಗೆ ರೂ.50.00 ಲಕ್ಷ ಹಾಗೂ ಹೊಳೆನರಸೀಪುರ ಪಟ್ಟಣದ ಬಸವಗುಡಿ ಬೀದಿಯಲ್ಲಿ ಜೈನಬಿಯ ಶಾದಿಮಹಲ್ ಅಭಿವೃದ್ಧಿ ಕಾಮಗಾರಿಗೆ ರೂ.50.00 ಲಕ್ಷ, ಒಟ್ಟು ರೂ.100.00 ಲಕ್ಷಗಳನ್ನು ಮಂಜೂರು ಮಾಡಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: MWD 08 WGA 2023, ದಿನಾಂಕ: 10-02-2023 ರಲ್ಲಿ ಹಾಸನ ಜಿಲ್ಲೆಯ ಹೊಳೆನರಸೀಪುರ ಪಟ್ಟಣ ಹೌಸಿಂಗ್ ಬೋರ್ಡ್‌ನಲ್ಲಿರುವ ಮದೀನ ಮಸೀದಿಯ ಅಭಿವೃದ್ಧಿ ಕಾಮಗಾರಿಗೆ ರೂ.50.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. |

ಸಂಖ್ಯೆ: **MWD 13 LMQ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

## ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 30
2. ಸದಸ್ಯರ ಹೆಸರು : ಶ್ರೀ ಐಹೊಳೆ ಡಿ.ಮಹಾಲಿಂಗಪ್ಪ
3. ಉತ್ತರಿಸಬೇಕಾದ ದಿನಾಂಕ: : 14-02-2023
4. ಉತ್ತರಿಸುವ ಸಚಿವರು : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಳಗಾವಿ ಜಿಲ್ಲೆ, ರಾಯಭಾಗ ವಿಧಾನಸಭಾ ಕ್ಷೇತ್ರದ ರಾಯಭಾಗ ಹಾಗೂ ಚಿಕ್ಕೋಡಿ ತಾಲ್ಲೂಕುಗಳಲ್ಲಿರುವ ಸರ್ಕಾರಿ ಕೆರೆಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಕೆರೆಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯು ನಿರಂತರ ಪ್ರಕ್ರಿಯೆಯಾಗಿದ್ದು, ಕೆರೆಗಳ ಅಭಿವೃದ್ಧಿಯ ಅವಶ್ಯಕತೆ ಹಾಗೂ ಲಭ್ಯವಾಗುವ ಅನುದಾನವನ್ನು ಆಧರಿಸಿ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಪ್ರಸ್ತುತ ಸಾಲಿನಲ್ಲಿ ರೂ.115.00 ಲಕ್ಷ ಅಂದಾಜು ವೆಚ್ಚದಲ್ಲಿ 3 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. |
| ಆ | ಹಾಗಿದ್ದಲ್ಲಿ, ಯಾವ ಯಾವ ಕೆರೆಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ; ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ನಿಗದಿಪಡಿಸಿರುವ ಅನುದಾನವೆಷ್ಟು; ಯಾವ ಕಾಲಮಿತಿಯಲ್ಲಿ ಈ ಕೆರೆಗಳನ್ನು ಅಭಿವೃದ್ಧಿಪಡಿ ಸಲಾಗುವುದು; | 2019-20ನೇ ಸಾಲಿನಿಂದ 2021-22ನೇ ಸಾಲಿನವರೆಗೆ ರೂ.291.33 ಲಕ್ಷ ವೆಚ್ಚದಲ್ಲಿ 16 ಕೆರೆಗಳಲ್ಲಿ 18 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br><br>2022-23ನೇ ಸಾಲಿನ ಆಯವ್ಯಯದ ಭಾಷಣದಲ್ಲಿ "ರಾಜ್ಯದ ಕೆರೆಗಳ ಸಮಗ್ರ ಅಭಿವೃದ್ಧಿಯನ್ನು ರೂ.500.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಕ್ರಿಯಾ ಯೋಜನೆಯನ್ನು ರೂಪಿಸಲಾಗುವುದು ಹಾಗೂ ಇದರಲ್ಲಿ ಪ್ರವಾಹದಿಂದ ಹಾನಿಯಾಗಿರುವ ಕೆರೆಗಳ ದುರಸ್ತಿಯನ್ನು ಕೈಗೊಂಡು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲು ರೂ.200.00 ಕೋಟಿಗಳನ್ನು ಮೀಸಲಾಗಿಡಲಾಗುವುದು" ಎಂದು ಘೋಷಿಸಲಾಗಿರುತ್ತದೆ.<br><br>ಅದರಂತೆ, ರಾಜ್ಯದ ಕೆರೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ರೂ.300.00 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ಎಂಐಡಿ/430/ ಎಂಐಎಸ್‌ಯು/2022, ದಿನಾಂಕ:17-06-2022ರನ್ವಯ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯಲ್ಲಿ |

| | | |
|---|---|---|
| | | ರಾಯಬಾಗ ವಿಧಾನಸಭಾ ಕ್ಷೇತ್ರದಲ್ಲಿ ರೂ.115.00 ಲಕ್ಷ ಅಂದಾಜು ವೆಚ್ಚದಲ್ಲಿ 3 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿಗಳಲ್ಲಿ 1 ಕಾಮಗಾರಿಯ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದೆ, 2 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ.<br><br>ವಿವರಗಳನ್ನು ಅನುಬಂಧ-2 ರಲ್ಲಿ ಸಲ್ಲಿಸಲಾಗಿದೆ. |
| ಇ | ಉಳಿದ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಮುಂದಾಗುವುದೇ; | ರಾಯಬಾಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ 16 ಕೆರೆಗಳಿರುತ್ತವೆ. ಈಗಾಗಲೇ ಎಲ್ಲ 16 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ. |
| ಈ | ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯೋಜಿಸಿದೆ; ಈ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರಕ್ಕೆ ತಗಲ ಬಹುದಾದ ಅಂದಾಜು ವೆಚ್ಚವೆಷ್ಟು; (ಸಂಪೂರ್ಣ ವಿವರ ನೀಡುವುದು) | ಕೆರೆಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯು ನಿರಂತರ ಪ್ರಕ್ರಿಯೆಯಾಗಿದ್ದು, ಕೆರೆಗಳ ಅಭಿವೃದ್ಧಿಯ ಅವಶ್ಯಕತೆ ಹಾಗೂ ಲಭ್ಯವಾಗುವ ಅನುದಾನವನ್ನು ಆಧರಿಸಿ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ. |
| ಉ | ಇಲ್ಲದಿದ್ದಲ್ಲಿ, ಕಾರಣಗಳೇನು? | ಈಗಾಗಲೆ, 16 ಕೆರೆಗಳಲ್ಲಿ 18 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. ಪ್ರಸ್ತುತ ವರ್ಷ 3 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. |

ಸಂಖ್ಯೆ: MID 22 LAQ 2023.

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ
ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

ವಿಧಾನಸಭೆ ಸದಸ್ಯರಾದ ಮಾನ್ಯ ಶ್ರೀ ಐಹೊಳೆ ಮಹಾಲಿಂಗಪ್ಪ (ರಾಯಭಾಗ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:30 ಕ್ಕೆ ಅನುಬಂಧ

ಬೆಳಗಾವಿ ಜಿಲ್ಲೆ ರಾಯಭಾಗ ವಿಧಾನಸಭಾ ಕ್ಷೇತ್ರದ ರಾಯಭಾಗ ಹಾಗೂ ಚಿಕ್ಕೋಡಿ ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಲಾಗಿರುವ ಕೆರೆ ಅಭಿವೃದ್ಧಿ ಕಾಮಗಾರಿಗಳ ವಿವರ

ಅನುಬಂಧ-1

| ಕ್ರ.ಸಂ. | ವರ್ಷ | ತಾಲ್ಲೂಕು | ಲೆಕ್ಕ ಶೀರ್ಷಿಕೆ | ಕೆರೆ ಅಭಿವೃದ್ಧಿ ಕಾಮಗಾರಿಯ ಹೆಸರು | ವೆಚ್ಚ | ಕಾಮಗಾರಿಯ ಹಂತ | ಷರಾ |
|---|---|---|---|---|---|---|---|
| 1 | 2 | 3 | 4 | 5 | 7 | 8 | 9 |
| 1 | 2019-20 | ರಾಯಬಾಗ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬೂದಿಹಾಳ ಕೆರೆಯ ಪುನರುಜ್ಜೀವನ ಕಾಮಗಾರಿ | 17.85 | ಪೂರ್ಣಗೊಂಡಿದೆ | |
| 2 | 2019-20 | ರಾಯಬಾಗ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬ್ಯಾಕೂಡ ಕೆರೆಯ ಪುನರುಜ್ಜೀವನ ಕಾಮಗಾರಿ | 17.85 | ಪೂರ್ಣಗೊಂಡಿದೆ | |
| 3 | 2019-20 | ರಾಯಬಾಗ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಮಿರಗಸಾಲಿ ಕೆರೆಯ ಪುನರುಜ್ಜೀವನ ಕಾಮಗಾರಿ | 17.85 | ಪೂರ್ಣಗೊಂಡಿದೆ | |
| 4 | 2019-20 | ರಾಯಬಾಗ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬಿರನಾಳ ಕೆರೆಯ ಪುನರುಜ್ಜೀವನ ಕಾಮಗಾರಿ | 17.85 | ಪೂರ್ಣಗೊಂಡಿದೆ | |
| 5 | 2019-20 | ರಾಯಬಾಗ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಮಾವಿನಹೊಂಡ ಕೆರೆಯ ಪುನರುಜ್ಜೀವನ ಕಾಮಗಾರಿ | 17.85 | ಪೂರ್ಣಗೊಂಡಿದೆ | |
| 6 | 2019-20 | ರಾಯಬಾಗ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಕೆಂಪಾಚಿಜಲಿ ಕೆರೆಯ ಪುನರುಜ್ಜೀವನ ಕಾಮಗಾರಿ | 17.85 | ಪೂರ್ಣಗೊಂಡಿದೆ | |
| 7 | 2019-20 | ರಾಯಬಾಗ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಜೋಡಹಟ್ಟಿ ಕೆರೆಯ ಪುನರುಜ್ಜೀವನ ಕಾಮಗಾರಿ | 17.85 | ಪೂರ್ಣಗೊಂಡಿದೆ | |
| 8 | 2019-20 | ರಾಯಬಾಗ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಮೇಖಳಿ ಕೆರೆಯ ಪುನರುಜ್ಜೀವನ ಕಾಮಗಾರಿ | 13.38 | ಪೂರ್ಣಗೊಂಡಿದೆ | |
| 9 | 2019-20 | ರಾಯಬಾಗ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬೆಂಡವಾಡ ಕೆರೆಯ ಪುನರುಜ್ಜೀವನ ಕಾಮಗಾರಿ | 13.38 | ಪೂರ್ಣಗೊಂಡಿದೆ | |
| 10 | 2019-20 | ಚಿಕ್ಕೋಡಿ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಜೈನಾಪೂರ (ಸೈಟ್--1), ಅತೀವೃಷ್ಟಿಯಿಂದ ಹಾನಿಯಾದ ಕೆರೆಯ ಪುನರುಜ್ಜೀವನ ಕಾಮಗಾರಿ | 17.80 | ಪೂರ್ಣಗೊಂಡಿದೆ | |
| 11 | 2019-20 | ಚಿಕ್ಕೋಡಿ | 4702 ಕೆರೆಗಳ ಆಧುನೀಕರಣ-- ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಜೈನಾಪೂರ (ಸೈಟ್-2) ಕೆರೆಯ ಪುನರುಜ್ಜೀವನ ಕಾಮಗಾರಿ | 17.80 | ಪೂರ್ಣಗೊಂಡಿದೆ | |

| ಕ್ರ.ಸಂ. | ವರ್ಷ | ತಾಲ್ಲೂಕು | ಲೆಕ್ಕ ಶೀರ್ಷಿಕೆ | ಕೆರೆ ಅಭಿವೃದ್ಧಿ ಕಾಮಗಾರಿಯ ಹೆಸರು | ವೆಚ್ಚ | ಕಾಮಗಾರಿಯ ಹಂತ | ಷರಾ |
|---|---|---|---|---|---|---|---|
| 1 | 2 | 3 | 4 | 5 | 7 | 8 | 9 |
| 12 | 2019-20 | ಚಿಕ್ಕೋಡಿ | 4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ವಡ್ರಾಳ & ಮುಗಳಿ ಕೆರೆಗಳು ಪುನರುಜ್ಜೀವನ ಕಾಮಗಾರಿ | 17.80 | ಪೂರ್ಣಗೊಂಡಿದೆ | |
| 13 | 2019-20 | ಚಿಕ್ಕೋಡಿ | 4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮೀರಾಪುರಹಟ್ಟಿ ಕೆರೆಯ ಅತೀವೃಷ್ಟಿ & ಪ್ರವಾಹದಿಂದ ಹಾನಿಯಾಗಿರುವುದರಿಂದ ಪುನರುಜ್ಜೀವನ ಕಾಮಗಾರಿ | 17.80 | ಪೂರ್ಣಗೊಂಡಿದೆ | |
| 14 | 2019-20 | ಚಿಕ್ಕೋಡಿ | 4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಚನ್ನವೀರಹಟ್ಟಿ ಕೆರೆಯ ಅತೀವೃಷ್ಟಿ & ಪ್ರವಾಹದಿಂದ ಹಾನಿಯಾಗಿರುವುದರಿಂದ ಪುನರುಜ್ಜೀವನ ಕಾಮಗಾರಿ ಕಾಮಗಾರಿ | 17.80 | ಪೂರ್ಣಗೊಂಡಿದೆ | |
| 15 | 2019-20 | ಚಿಕ್ಕೋಡಿ | 4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮೀರಾಪುರಹಟ್ಟಿ-2 ಕೆರೆಯ ಅತೀವೃಷ್ಟಿ & ಪ್ರವಾಹದಿಂದ ಹಾನಿಯಾಗಿರುವುದರಿಂದ ಪುನರುಜ್ಜೀವನ ಕಾಮಗಾರಿ ಕಾಮಗಾರಿ | 17.80 | ಪೂರ್ಣಗೊಂಡಿದೆ | |
| 16 | 2019-20 | ಚಿಕ್ಕೋಡಿ | 4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮುಗಳಿ ಕೆರೆಯ ಅತೀವೃಷ್ಟಿ & ಪ್ರವಾಹದಿಂದ ಹಾನಿಯಾಗಿರುವುದರಿಂದ ಪುನರುಜ್ಜೀವನ ಕಾಮಗಾರಿ ಕಾಮಗಾರಿ | 13.37 | ಪೂರ್ಣಗೊಂಡಿದೆ | |
| 17 | 2019-20 | ಚಿಕ್ಕೋಡಿ | 4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು | ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ನಂದಿಕುರಳಿ ಕೆರೆಯ ಅತೀವೃಷ್ಟಿ & ಪ್ರವಾಹದಿಂದ ಹಾನಿಯಾಗಿರುವುದರಿಂದ ಪುನರುಜ್ಜೀವನ ಕಾಮಗಾರಿ | 13.39 | ಪೂರ್ಣಗೊಂಡಿದೆ | |
| 18 | 2021-22 | ರಾಯಬಾಗ | ವಿಶೇಷ ಅಭಿವೃದ್ಧಿ ಯೋಜನೆ | ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬೆಂಡವಾಡ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿ | 6.06 | ಪೂರ್ಣಗೊಂಡಿದೆ | |
| | | | | ಒಟ್ಟು | **291.33** | | |
| | | | | | | | |
| | | | | | | | |
| | | | | | | | |

ವಿಧಾನಸಭೆ ಸದಸ್ಯರಾದ ಮಾನ್ಯ ಶ್ರೀ ಐಹೊಳೆ ಮಹಾಲಿಂಗಪ್ಪ (ರಾಯಭಾಗ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:30 ಕ್ಕೆ ಅನುಬಂಧ -2

ಬೆಳಗಾವಿ ಜಿಲ್ಲೆ ರಾಯಭಾಗ ವಿಧಾನಸಭಾ ಕ್ಷೇತ್ರದ ರಾಯಭಾಗ ಹಾಗೂ ಚಿಕ್ಕೋಡಿ ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಲಾಗಿರುವ ಕೆರೆ ಅಭಿವೃದ್ಧಿ ಕಾಮಗಾರಿಗಳ ವಿವರ

ರೂ.ಲಕ್ಷಗಳಲ್ಲಿ

| ಕ್ರ.ಸಂ. | ವರ್ಷ | ತಾಲ್ಲೂಕು | ಲೆಕ್ಕ ಶೀರ್ಷಿಕೆ | ಕೆರೆ ಅಭಿವೃದ್ಧಿ ಕಾಮಗಾರಿಯ ಹೆಸರು | ಅಂದಾಜು ಮೊತ್ತ | ವೆಚ್ಚ | ಕಾಮಗಾರಿಯ ಹಂತ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | 2022-23 | ರಾಯಬಾಗ | 4702 ಕೆರೆಗಳ ಸಮಗ್ರ ಅಭಿವೃದ್ಧಿ ಯೋಜನೆ | ಬಿರನಾಳ ಸಣ್ಣ ನೀರಾವರಿ ಕೆರೆ ಅಭಿವೃದ್ಧಿ ಕಾಮಗಾರಿ | 40.00 | 0.00 | | ಟೆಂಡರ್ ಪ್ರಕ್ರಿಯೆಯಲ್ಲಿದೆ |
| 2 | 2022-23 | ರಾಯಬಾಗ | 4702 ಕೆರೆಗಳ ಸಮಗ್ರ ಅಭಿವೃದ್ಧಿ ಯೋಜನೆ | ಮೇಖಳಿ ಸಣ್ಣ ನೀರಾವರಿ ಕೆರೆ ಅಭಿವೃದ್ಧಿ ಕಾಮಗಾರಿ | 40.00 | 0.00 | | ಕಾರ್ಯಾದೇಶ ನೀಡಲಾಗಿದೆ. |
| 3 | 2022-23 | ರಾಯಬಾಗ | 4702 ಕೆರೆಗಳ ಸಮಗ್ರ ಅಭಿವೃದ್ಧಿ ಯೋಜನೆ | ಬೆಂಡವಾಡ ಸಣ್ಣ ನೀರಾವರಿ ಕೆರೆ ಅಭಿವೃದ್ಧಿ ಕಾಮಗಾರಿ | 35.00 | 0.00 | | ಟೆಂಡರ್ ಪ್ರಕ್ರಿಯೆಯಲ್ಲಿದೆ |
| | | | | ಒಟ್ಟು | 115.00 | 0.00 | | |
| | | | | | | | | |

# ಕರ್ನಾಟಕ ವಿಧಾನ ಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 31 |
| ಸದಸ್ಯರ ಹೆಸರು | : | ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) |
| ಉತ್ತರಿಸಬೇಕಾದ ದಿನಾಂಕ | : | 14.02.2023 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಿಡಿಎ ಹೊರಡಿಸಿರುವ ಅಂತಿಮ ಅಧಿಸೂಚನೆಯನ್ವಯ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ (NPKL) ಬ್ಲಾಕ್ ವಾರು ಭೂಸ್ವಾಧೀನ ಪಡಿಸಿಕೊಳ್ಳಲು ಯೋಜಿಸಿದ ವಿವರವೇನು ಹಾಗೂ ವಾಸ್ತವವಾಗಿ ಭೂಸ್ವಾಧೀನಪಡಿಸಿಕೊಂಡ ಭೂಮಿ ಎಷ್ಟು; (ವಿವರ ನೀಡುವುದು) | ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಿಸಲು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿಯ 4 ಗ್ರಾಮಗಳಾದ ಶೀಗೆಹಳ್ಳಿ, ಕೊಡಿಗೇಹಳ್ಳಿ, ಕನ್ನಲ್ಲಿ, ಮಂಗನಹಳ್ಳಿ ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿಯ 8 ಗ್ರಾಮಗಳಾದ ಕೊಮ್ಮಘಟ್ಟ, ಭೀಮನಕುಪ್ಪೆ, ಭೀಮನಕುಪ್ಪೆ-ರಾಮಸಾಗರ, ಸೂಲಿಕೆರೆ, ಕೆಂಚನಪುರ, ರಾಮಸಂದ್ರ, ಕೊಮ್ಮಘಟ್ಟ ಕೃಷ್ಣಸಾಗರ ಹಾಗೂ ಚೆಲ್ಲಘಟ್ಟದ **ಒಟ್ಟು 12** ಗ್ರಾಮಗಳಲ್ಲಿ **4043** ಎಕರೆ **27** ಗುಂಟೆ ಜಮೀನಿನಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣ ಮಾಡಲು ಸರ್ಕಾರಿ ಆದೇಶದ ಸಂಖ್ಯೆ:ಯುಡಿಡಿ/51/ಎಂ.ಎನ್.ಎಕ್ಸ್/2010 ದಿನಾಂಕ:18/02/2010ರ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br><br>ಪ್ರಾರಂಭದಿಂದ ಪ್ರಸ್ತುತದವರೆಗೆ ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಿರುವ ಒಟ್ಟು **2694** ಎಕರೆ **26** ಗುಂಟೆ ಜಾಗದಲ್ಲಿ ಬಡಾವಣೆ ನಿರ್ಮಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>**ಬ್ಲಾಕ್‌ವಾರು ಅಧಿಸೂಚನೆ ಮಾಡಲಾದ ವಿವರಗಳು ಈ ಕೆಳಗಿನಂತಿವೆ.** |

| Block No | Notified Extent | | Handed Over Extent | | Tackled Extent | |
|---|---|---|---|---|---|---|
| | A | G | A | G | A | G |
| 1 | 619 | 17 | 323 | 20 | 272 | 15 |
| 2 | 277 | 25 | 197 | 2 | 138 | 8 |
| 3 | 312 | 25 | 212 | 8 | 177 | 32 |
| 4 | 302 | 17 | 218 | 27 | 190 | 16 |
| 5 | 601 | 33 | 394 | 14 | 286 | 35 |
| 6 | 624 | 21 | 375 | 11 | 329 | 10 |
| 7 | 522 | 8 | 416 | 29 | 381 | 27 |
| 8 | 296 | 12 | 263 | 25 | 203 | 19 |
| 9 | 412 | 1 | 293 | 10 | 237 | 26 |
| **Total** | **3968** | **39** | **2694** | **26** | **2217** | **28** |

| | | |
|---|---|---|
| ಆ | ಭೂಸ್ವಾಧೀನ ಸಮಸ್ಯೆಯಿಂದಾಗಿ ಬಡಾವಣೆ ನಕ್ಷೆಯಲ್ಲಿ ತೋರಿಸಿರುವಂತೆ ಅನೇಕ ಸ್ಥಳಗಳಲ್ಲಿ ಬಿಡಿಎಯ ಆಂತರಿಕ ರಸ್ತೆಗಳು ಹಾಗೂ ಯೋಜಿತ RMP ಮತ್ತು ಪ್ರವೇಶ ರಸ್ತೆಗಳನ್ನು ರೂಪಿಸಲು ಸಾಧ್ಯವಾಗಿಲ್ಲದಿರುವ ಎಷ್ಟು ಪ್ರಕರಣಗಳಿವೆ; | ನಾಡಪ್ರಭು ಕೆಂಪೇಗೌಡ ಬಡಾವಣೆಯ ಒಟ್ಟು 09 ಬ್ಲಾಕ್ ಗಳಲ್ಲಿ 9ಮೀ, 12ಮೀ, 15ಮೀ, 18ಮೀ, 24ಮೀ & 30ಮೀ ನ ಅನೇಕ ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಭೂಸ್ವಾಧೀನಗೊಳ್ಳದ (ಎನ್.ಎನ್.ಎ) ಜಾಗಗಳಲ್ಲಿ ಒಟ್ಟು 104 ರಸ್ತೆಗಳ ಪ್ರಕರಣಗಳಿದ್ದು, 15 ಎಕರೆ 20 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಬಡಾವಣೆಯ ಪರಿಮಿತಿಯ ವ್ಯಾಪ್ತಿಯಲ್ಲಿ ಆರ್.ಎಂ.ಪಿ ರಸ್ತೆಗಾಗಿ ಒಟ್ಟು 71 ಭೂಸ್ವಾಧೀನಗೊಳ್ಳದ ರಸ್ತೆಗಳ ಪ್ರಕರಣಗಳಿದ್ದು, 22 ಎಕರೆ 30 1/4, ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಭೂಸ್ವಾದೀನ ಪ್ರಕ್ರಿಯೆ ಮುಗಿದ ನಂತರ ಸದರಿ ರಸ್ತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. |
| ಇ | ಬಡಾವಣೆ ನಕ್ಷೆಯಲ್ಲಿ ತೋರಿಸಿರುವಂತೆ ರಸ್ತೆಗಳನ್ನು ಅಭಿವೃದ್ಧಿಪಡಿಸದ ಕಾರಣ ಪ್ರವೇಶ ಸಮಸ್ಯೆಗಳನ್ನು ಎದುರಿಸುತ್ತಿರುವ NPKL ಹಂಚಿಕೆದಾರರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪರ್ಯಾಯ ನಿವೇಶನಗಳನ್ನು ನೀಡುವುದೇ; | ನಾಡಪ್ರಭು ಕೆಂಪೇಗೌಡ ಬಡಾವಣೆಯ ಪ್ರಸ್ತುತ ಪ್ರಗತಿಯ ಹಂತದಲ್ಲಿದ್ದು, ಬಡಾವಣೆಯಲ್ಲಿ ಬರುವ ಎಲ್ಲಾ ನಿವೇಶನಗಳಿಗೂ ಸಂಪರ್ಕ ರಸ್ತೆಯನ್ನು ಕಲ್ಪಿಸಲಾಗುವುದು. ಆದಕಾರಣ ಪರ್ಯಾಯ ನಿವೇಶನಗಳನ್ನು ನೀಡುವ ಸಂಭವ ಉದ್ಭವಿಸುವುದಿಲ್ಲ. |
| ಈ | ಪ್ರಮುಖ ರಸ್ತೆ (MAR) ಯೋಜನೆಯ ಕಾಮಗಾರಿಯು ಯಾವ ಹಂತದಲ್ಲಿದೆ; ವಿಸ್ತೃತ ಮೂಲ ಯೋಜನಾ ವರದಿ (ಡಿಪಿಆರ್) ಪ್ರಕಾರ ಇದು ಪ್ರಗತಿಯಲಿದೆಯೇ; ಮೈಸೂರು ಮತ್ತು ಮಾಗಡಿ ರಸ್ತೆಗಳಿಗೆ ತಡೆರಹಿತ ಪ್ರವೇಶವನ್ನು ಕಲ್ಪಿಸುವ ಈ ಕಾಮಗಾರಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಯಾವಾಗ ಪೂರ್ಣಗೊಳಿಸುತ್ತದೆ? | ಉದ್ದೇಶಿತ ಮುಖ್ಯ ಸಂಪರ್ಕ ರಸ್ತೆಯು 100.00 ಮೀ ಅಗಲದ ಮುಖ್ಯ ಸಂಪರ್ಕ ರಸ್ತೆಯಾಗಿದ್ದು, ಮಾಗಡಿ ರಸ್ತೆಯಿಂದ ಪ್ರಾರಂಭವಾಗಿ ಮೈಸೂರು ರಸ್ತೆ ಮುಕ್ತಾಯದ ವರೆಗೆ ಒಟ್ಟು 10.71 ಕಿ.ಮೀ ಉದ್ದವಿರುತ್ತದೆ. ಇದು ಡಿ.ಪಿ.ಆರ್ ಪ್ರಕಾರ ಇರುತ್ತದೆ. ಬಿಡಿಎ ವತಿಯಿಂದ 0.00 ಕಿ.ಮೀ ನಿಂದ 10.35 ಕಿ.ಮೀ ವರೆಗೆ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. 10.35 ಕಿ.ಮೀ ರಿಂದ 10.71 ಕಿ.ಮೀ ವರೆಗೆ ಬಿ.ಎಂ.ಆರ್.ಸಿ.ಎಲ್ ವತಿಯಿಂದ ರಸ್ತೆ ನಿರ್ಮಾಣ ಮಾಡಲಾಗುವುದು.<br><br>**ಅನುಮೋದಿತ ಡಿ.ಪಿ.ಆರ್ ನಲ್ಲಿ ಅಳವಡಿಸಿಕೊಂಡಿರುವ ಅಂಶಗಳು ಈ ಕೆಳಕಂಡಂತೆ ಇರುತ್ತವೆ.**<br><br>ಉದ್ದೇಶಿತ ಮುಖ್ಯ ಸಂಪರ್ಕ ರಸ್ತೆಯನ್ನು (ಪಿ.ಆರ್.ಆರ್-2) ಅನುಮೋದನೆಯಾಗಿರುವ ಪಂಕ್ತೀಕರಣದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಮುಖ್ಯ ಸಂಪರ್ಕ ರಸ್ತೆಗೆ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳನ್ನು ಉದ್ದೇಶಿತ 100.00 ಮೀ ಅಗಲದಲ್ಲಿ 06 ಪಥಗಳ 3.00 ಮೀ ಮೀಡಿಯನ್ ಒಳಗೊಂಡ 10.00 ಮೀ ಅಗಲದ 2 ಮುಖ್ಯ ರಸ್ತೆ ಹಾಗೂ ರಸ್ತೆ ಇಕ್ಕೆಲಗಳಲ್ಲಿ ಎರಡು Boulevard ಜಾಗಗಳನ್ನು ಹೊರತುಪಡಿಸಿ 02 ಪಥಗಳ 9.00 ಮೀಟರ್ ಅಗಲಕ್ಕೆ ಎರಡು ಸರ್ವಿಸ್ ರಸ್ತೆಗಳ ನಿರ್ಮಾಣಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.<br><br>ಮುಖ್ಯ ಸಂಪರ್ಕ ರಸ್ತೆಯಿಂದ ಬಡಾವಣೆ ರಸ್ತೆಗಳಿಗೆ ಸಂಪರ್ಕ ಕಲ್ಪಿಸಲು ಈ ಕೆಳಕಂಡ ಚೈನೇಜ್ ಗಳಲ್ಲಿ ರೋಟರಿಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ. |

| | | | |
|---|---|---|---|
| | | | ಕಿ.ಮೀ 2.40 ರಲ್ಲಿ ರೋಟರಿ ನಂ.1<br><br>ಕಿ.ಮೀ 4.25 ರಲ್ಲಿ ರೋಟರಿ ನಂ.2<br><br>ಕಿ.ಮೀ 6.25 ರಲ್ಲಿ ರೋಟರಿ ನಂ.3<br><br>ಕಿ.ಮೀ 7.90 ರಲ್ಲಿ ರೋಟರಿ ನಂ.4<br><br>ಈ ಮೇಲಿನಂತೆ 04 ರೋಟರಿಗಳನ್ನು ಉದ್ದೇಶಿತ ಜಾಗದಲ್ಲಿ ನಿರ್ಮಿಸಲಾಗುತ್ತಿದೆ.<br><br>ಆದರೆ ಕಿ.ಮೀ 9.30 ರಲ್ಲಿ ರೋಟರಿ ನಂ.5 ಇದ್ದು, ಇದರ ಬದಲಾಗಿ 9.65 ಕಿ.ಮೀನಲ್ಲಿ ಕೆಳಸೇತುವೆಯನ್ನು ನಿರ್ಮಿಸಲಾಗುತ್ತಿದೆ.<br><br>ಸದರಿ ರಸ್ತೆಯ ಆಯ್ದಭಾಗಗಳಲ್ಲಿ ಈವರೆವಿಗೂ 7.71 ಕಿ.ಮೀ ರಸ್ತೆಯನ್ನು ನಿರ್ಮಾಣ ಕಾಮಗಾರಿಯು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. ಉಳಿಕೆ ರಸ್ತೆ ಕಾಮಗಾರಿಯನ್ನು ಭೂ ಸ್ವಾಧೀನ ಪ್ರಕ್ರಿಯೆ ವಿಳಂಭದಿಂದ ಕೈಗೊಂಡಿರುವುದಿಲ್ಲ. ರಸ್ತೆಗಾಗಿ ಕಾಯ್ದಿರಿಸಿರುವ ಜಮೀನಿನ ಮೇಲೆ ನ್ಯಾಯಾಲಯದಲ್ಲಿ ದಾವೆಗಳು ಬಾಕಿ ಇರುವುದರಿಂದ, ದಾವೆಗಳು ಇತ್ಯರ್ಥಗೊಂಡ ನಂತರ ಪೂರ್ಣ ಪ್ರಮಾಣದಲ್ಲಿ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. |

**ಸಂಖ್ಯೆ: ನಅಇ 37 ಬೆಂಭೂಸ್ವಾ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 32 |
| 2 | ಸದಸ್ಯರ ಹೆಸರು | : | ಶ್ರೀ ಸುರೇಶ್ ಕುಮಾರ್.ಎಸ್(ರಾಜಾಜಿನಗರ) |
| 3 | ಉತ್ತರಿಸುವ ದಿನಾಂಕ | : | 14-02-2023 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 3 ತಿಂಗಳುಗಳಲ್ಲಿ ಬಿ.ಬಿ.ಎಂ.ಪಿ.ಯು ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ವಸತಿ ಪ್ರದೇಶದಲ್ಲಿ ಸ್ಥಾಪಿತವಾಗಿವೆ ಎಂಬ ಆಧಾರದ ಮೇಲೆ ಎಷ್ಟು ನೋಟೀಸ್‌ಗಳನ್ನು ನೀಡಿದೆ; | ಪಾಲಿಕೆಯು 40 ಅಡಿಗಿಂತ ಕಡಿಮೆ ರಸ್ತೆ ಅಗಲವಿರುವ ವಸತಿ ಪ್ರದೇಶಗಳಲ್ಲಿರುವ ವಾಣಿಜ್ಯ ಉದ್ದಿಮೆಗಳಿಗೆ ನೋಟೀಸ್ ಜಾರಿ ಮಾಡಿರುವ ವಿವರಗಳನ್ನು **ಅನುಬಂಧ**-1ರಲ್ಲಿ ನೀಡಿದೆ |
| ಆ | ಇವುಗಳಲ್ಲಿ ಬಹುತೇಕ ಅಂಗಡಿಗಳು 30 ಅಡಿಗಿಂತ ಕಡಿಮೆ ಅಗಲವಿರುವ ರಸ್ತೆಯುಳ್ಳ ಬೆಂಗಳೂರಿನ ಅತ್ಯಂತ ಹಳೆಯ ಪ್ರದೇಶಗಳಲ್ಲಿ ಸ್ಥಾಪಿತವಾಗಿವೆ ಎಂಬುದು ಸರ್ಕಾರಕ್ಕೆ ತಿಳಿದಿದೆಯೇ; | ತಿಳಿದಿದೆ. |
| ಇ | ಬೆಂಗಳೂರಿನ ಹಳೇ ಪ್ರದೇಶದಲ್ಲಿ 30 ಅಡಿಗಿಂತ ಕಡಿಮೆ ಅಗಲ ರಸ್ತೆಯಿರುವ ಜನ ನಿಬಿಡ ವ್ಯಾಪಾರಿ ಬೀದಿಗಳನ್ನು ಮಿಶ್ರ ಬಳಕೆ / ವಾಣಿಜ್ಯ ಪ್ರದೇಶಗಳೆಂದು ವರ್ಗೀಕರಿಸಲು ಸರ್ಕಾರ ಕ್ರಮಕೈಗೊಳ್ಳುತ್ತಿದೆಯೇ; | ಸರ್ಕಾರದಿಂದ ದಿನಾಂಕ 25.06.2007 ರಂದು ಅನುಮೋದನೆಗೊಂಡಿರುವ RMP-2015ರ ಮಹಾಯೋಜನೆಯ ವಲಯ ನಿಯಮಾವಳಿಯಲ್ಲಿ ವಸತಿ, ವಸತಿ (ಮಿಶ್ರ) ಭೂಉಪಯೋಗ ವಲಯಗಳಲ್ಲಿ ಪೂರಕ ಚಟುವಟಿಕೆಗಳ (Ancillary use) ಅನುಮತಿಸುವ ಸಂಬಂಧ ಅವಕಾಶವನ್ನು ಕಲ್ಪಿಸಲಾಗಿತ್ತು.<br><br>ಸಿಟಿಜನ್ ಆಕ್ಷನ್ ಫೋರಂ ಮತ್ತು ಇತರೆ ಸಂಘ / ಸಂಸ್ಥೆಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 3676/2008 ಮತ್ತು ರಿಟ್ ಅರ್ಜಿ ಸಂಖ್ಯೆ:43472-43474/2011ನ್ನು ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:19-02-2014ರಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ:-<br><br>"That no commercial activity of whatsoever nature shall be allowed in residential main and residential mixed zones in the three rings, namely Ring No. 1, Ring No. 2, and Ring No. 3, if road width is less than 40 feet. |

"That no commercial activity of whatsoever nature shall be allowed in residential main and residential mixed zones in the three rings, namely Ring No. 1, Ring No. 2, and Ring No. 3, if road width is less than 40 feet.

| | | |
|---|---|---|
| | | That only ancillary usages mentioned in the resolution shall be permitted in residential main and residential mixed zones in Ring No. 1 and Ring No. 2 up to 20% of the built up area or 50 Sq. Mtrs. Whichever is lower provided the width of the road is above 40 feet." |
| | | ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಸರ್ಕಾರವು ವಲಯ ನಿಯಮಾವಳಿಗಳಿಗೆ ತಿದ್ದುಪಡಿಯನ್ನು ಅಧಿಸೂಚನೆ ಸಂಖ್ಯೆ: ನಅಇ 105 ಎಂಎನ್‌ಜೆ 2008, ಬೆಂಗಳೂರು, ದಿನಾಂಕ 20.03.2015 ರಲ್ಲಿ ಹೊರಡಿಸಲಾಗಿದ್ದು, ಪ್ರಸ್ತುತ ಅಧಿಸೂಚನೆಯಲ್ಲಿನ ಅವಕಾಶಗಳಂತೆ ಕ್ರಮ ವಹಿಸಲಾಗುತ್ತಿದೆ. ಅಧಿಸೂಚನೆಯ ಪ್ರತಿಯನ್ನು ಅನುಬಂಧ-2ದಲ್ಲಿ ನೀಡಿದೆ. |
| ಈ | ಸರ್ಕಾರವು 2015 ರಿಂದ ಬೆಂಗಳೂರಿನಲ್ಲಿ ವಾಣಿಜ್ಯ / ವಸತಿ ವಲಯಗಳ ಮಾದರಿಯಲ್ಲಿ ಮರು ವರ್ಗೀಕರಿಸಿಲ್ಲದಿರುವುದರಿಂದ ಬಹಳಷ್ಟು ವ್ಯಾಪಾರಿಗಳು / ಅಂಗಡಿ ಮಾಲೀಕರು / ವಾಣಿಜ್ಯ ಸಂಸ್ಥೆಗಳಿಗೆ ಅನಾನುಕೂಲತೆ ಉಂಟಾಗಿದ್ದು, ಹೊಸ ಪರಿಷ್ಕರಣೆಯನ್ನು ಕೈಗೊಳ್ಳಲು ಸರ್ಕಾರದ ಮುಂದೆ ಯಾವುದಾದರೂ ಯೋಜನೆಗಳಿವೆಯೇ? | RMP-2015 ಅನ್ನು ಪರಿಷ್ಕರಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದ್ದು, ಪರಿಷ್ಕರಣೆಯಲ್ಲಿ ಕುಂದುಕೊರತೆಗಳ ಕುರಿತಂತೆ ವಲಯ ನಿಯಮಾವಳಿಗಳಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳಲು ನಿಯಮಾನುಸಾರ ಪರಿಶೀಲಿಸಲಾಗುವುದು. |

**ಸಂಖ್ಯೆ: ನಅಇ 35 ಬಿಬಿಎಲ್ 2023(ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3277 ಅನುಬಂಧ - 1

| BBMP Residential Area Authorized and Unauthozied Trade Zone wise abstract as on 20-01-2023 | | | | | | | |
|---|---|---|---|---|---|---|---|
| Sl. No | Zone | Total Numbers of old Wards | Total Numbers of New Wards | No. of unauthorized Trades in Residential areas | | What are the measures taken againist unauthorized trades in residential areas | |
| | | | | Road width Less than 40 feet | Road width more than 40 feet | No. of Trade Closed | No. of Notice issue to Trade |
| 1 | Bommanahalli | 16 | 27 | 621 | 33 | 0 | 654 |
| 2 | Dasarahalli | 8 | 12 | 1797 | 15 | 0 | 1812 |
| 3 | East | 44 | 47 | 3439 | 1727 | 126 | 2108 |
| 4 | Mahadevpura | 17 | 26 | 1241 | 0 | 0 | 1189 |
| 5 | R R Nagar | 14 | 22 | 1493 | 448 | 0 | 934 |
| 6 | South | 44 | 48 | 4830 | 715 | 5 | 5304 |
| 7 | West | 44 | 46 | 3047 | 0 | 1 | 3357 |
| 8 | Yelahanka | 11 | 15 | 1091 | 0 | 0 | 1091 |
| Grand Total | | 198 | 243 | 17559 | 2938 | 132 | 16449 |

13/02/2023

ಮುಖ್ಯ ಆರೋಗ್ಯಾಧಿಕಾರಿ
ಸಾರ್ವಜನಿಕ ಆರೋಗ್ಯ
ಬೃಹತ್ ಬೆಂಗಳೂರು ಮಹಾನಗರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 3೨ಕ್ಕೆ ಅನುಬಂಧ - ೨

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ - III<br>Part - III | ಬೆಂಗಳೂರು, ಸೋಮವಾರ, ಮಾರ್ಚ್ ೨೩, ೨೦೧೫ (ಚೈತ್ರ ೦೨, ಶಕ ವರ್ಷ ೧೯೩೭)<br>Bengaluru, Monday, March 23, 2015 (Chaithra 02, Shaka Varsha 1937) | ನಂ. ೨೩೦<br>No. 230 |
|---|---|---|

URBAN DEVELOPMENT SECRETARIAT

NOTIFICATION

No: UDD 105 MNJ 2008, Bangalore, Dated:20/03/2015

As the matter has come up for hearing before the Hon'ble High Court wherein it was observed that the above mentioned Notification No.UDD 105 MNJ 2008 dated 11/12/2014 is not in conformity with the affidavit filed by the BDA on 19/02/2014 and as such, in the light of the W.P.2661/2015 (PIL) being filed on the above issue, the notification issued earlier is hereby withdrawn with immediate effect with a condition that all the proposals approved consequent to the Notification stand cancelled. As per the affidavit filed by the BDA, the zoning regulations of Bengaluru in the Revised Master Plan 2015 and amendments, regulations 2014 are amended as below:

1) No commercial activity of whatsoever nature shall be allowed in residential main and residential mixed zones in the three rings, viz., Ring No.1, Ring No.2 and Ring No.3 if road width is less than 40 feet.

2) The ancillary usage shall be permitted in residential main and residential mixed zones in Ring No.1 and Ring No.2 upto 20% of the built up area or 50 sq mtrs whichever is lower provided the width of the road is above 40 feet.

3) In Ring No.3, the ancillary usages may be permitted as the main use in residential main and in residential mixed zones if the plot size is more than 1000 sq. Mtrs., having frontage of 10 mtrs. Or more and if the width of the road is more than 60 feet.

4) The ancillary usages are shown in the table below:

| Sl. No. | Permissible uses |
|---|---|
| 1 | <u>**Table 1: Permissible land use in Residential category**</u><br>1) Plotted residential developments<br>2) Villas, semi detached houses<br>3) Apartments, Hostels, Dharmashala<br>4) Multi Dwelling Housing, Service Apartments.<br>5) Group Housing [Development Plans]<br>6) Bus bays, Auto stand, Bus shelters information kiosk<br>7) Metro stations, parking areas<br>8) Multi level car parking as part of residential apartments to cater the needs of residents only |

| | |
|---|---|
| 2 | 4.1.2] Regulations<br>(i) Permissible land uses: In Ring-I and II<br>• Main land use - R<br>• Ancillary land uses allowed are:-<br>1. Petty shops, Newspaper, Stationery and Milk booth, Vulcanizing shops<br>2. STD/FAX/Internet Centre / ATM centers<br>3. Hair Dressing and Beauty parlors<br>4. Offices / Clinics belonging to professional services category and self owned<br>5. Tailoring, Dry cleaners<br>6. Bakery and Sweetmeat shop<br>7. Pathological Labs<br>8. Retail shops and hardware shops<br>9. Banks, Insurance and Consulting and Business Offices.<br>10. Mutton and Poultry stalls, Cold storages<br>11. Job typing / Computer training institutes, Cybercafé, Internet browsing<br>12. Uses for small repair centers- electronic, mechanical automobile etc,<br>13. Photo studio<br>14. All uses under I-1<br>15. Sub offices of utilities & Urban amenities<br>• Ancillary use is allowable upto 20% of the total built up area or 50 sq.m whichever is lower only in plots abutting to roads having width 12m or more<br>(ii) Permissible Land uses: In Ring-III<br>• Main land use - R and T1<br>• Ancillary land use category: C2, I-2 and U3<br>• Ancillary use is allowable upto 20% of the total built up area or 50 sqm whichever is lower only in plots abutting to roads having width 12m or more<br>• If the plot size is more than 1000sqm having a frontage of 10m or more abutting road is more than 18m width, then ancillary uses can be used as main use. |
| 3 | 4.2.2] Regulations<br>(i) Permissible land uses: In Ring-I and II:-<br>• Main land use - R<br>• Ancillary Land uses allowed are:-<br>1. Petty shops, Newspaper, Stationery and Milk booth, Vulcanizing shops<br>2. STD/FAX/Internet Centre / ATM centers<br>3. Hair Dressing and Beauty parlors<br>4. Offices / Clinics belonging to professional services category and self owned<br>5. Tailoring, Dry cleaners<br>6. Bakery and Sweetmeat shop<br>7. Pathological Labs<br>8. Retail shops and hardware shops<br>9. Banks, Insurance and Consulting and Business Offices.<br>10. Mutton and Poultry stalls, Cold storages |

| | |
|---|---|
| | 11. Job typing / Computer training institutes, Cybercafé, Internet browsing<br>12. Uses for small repair centers- electronic, mechanical automobile etc,<br>13. Photo studio<br>14. All uses under I-1<br>15. Sub offices of utilities & Urban amenities<br>• Ancillary use is allowable upto 20% of the total built up area or 50 sqm whichever is lower only in plots abutting to roads having width 12m or above.<br>4.2.2] Regulations |
| | (i) Permissible Land use: In Ring-III<br>• Main land use category - R<br>• Ancillary land use category: C3, I-2, T2 and U4<br>• Ancillary uses allowable upto 30% of the total built up area<br>• If the plot size is more than 1000sqm having a frontage of 10m or more and abutting road is more than 18m width, then ancillary uses can be used as main use. |

**N. NARASIMHAMURTHY**
Under Secretary to Government
Urban Development Department

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 33 |
| ಸದಸ್ಯರ ಹೆಸರು | : | ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) |
| ಉತ್ತರಿಸಬೇಕಾದ ದಿನಾಂಕ | : | 14-02-2023 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

*****

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಜಲ ಮಂಡಳಿಯು (BWSSB) ಪ್ರಸಕ್ತ ಸಾಲಿನಲ್ಲಿ ಕೊಳವೆ ನೀರಿನ ಸಂಪರ್ಕವನ್ನು ಯಾವ ಯಾವ ಹೊಸ ಬಿ.ಡಿ.ಎ ಬಡಾವಣೆಗಳಿಗೆ ಒದಗಿಸಲಿದೆ; (ವಿವರ ನೀಡುವುದು) | ಬೆಂಗಳೂರು ಜಲಮಂಡಳಿಯು (BWSSB) ಪ್ರಸಕ್ತ ಸಾಲಿನಲ್ಲಿ ಯಾವುದೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಹೊಸ ಬಡಾವಣೆಗಳಿಗೆ ನೀರಿನ ಸಂಪರ್ಕವನ್ನು ಕಲ್ಪಿಸಿರುವುದಿಲ್ಲ. |
| ಆ) | ಬಿ.ಬಿ.ಎಂ.ಪಿಗೆ ಹೊಸದಾಗಿ ಸೇರ್ಪಡೆಗೊಂಡ 110 ಗ್ರಾಮಗಳಿಗೆ BWSSB ನೀರಿನ ಸಂಪರ್ಕವನ್ನು ಒದಗಿಸುವ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ; ಸದರಿ ಯೋಜನೆಯ ಕಾಮಗಾರಿಯು ಯಾವಾಗ ಪೂರ್ಣಗೊಳ್ಳುತ್ತದೆ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 110 ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಯನ್ನು ಮೇ 2017 ರಲ್ಲಿ ಪ್ರಾರಂಭಿಸಿ, ಡಿಸೆಂಬರ್ 2021 ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ.<br><br>110 ಹಳ್ಳಿಗಳ ಪೈಕಿ 51 ಹಳ್ಳಿಗಳಿಗೆ (ಹಳ್ಳಿಗಳ ವಿವರ ಅನುಬಂಧದಲ್ಲಿ ವಿವರಿಸಲಾಗಿದೆ) ಕುಡಿಯುವ ನೀರನ್ನು ಒದಗಿಸಲು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸದರಿ ಹಳ್ಳಿಗಳ ಬಹುತೇಕ ಪ್ರದೇಶಗಳಿಗೆ ಲಭ್ಯವಿರುವ ನೀರಿಗೆ ಅನುಗುಣವಾಗಿ, ಸರಬರಾಜು ಮಾಡಲಾಗುತ್ತಿದೆ.<br><br>ಪ್ರಸ್ತುತ, ಬೆಂಗಳೂರು ಜಲಮಂಡಳಿಯು ಕಾವೇರಿ 5ನೇ ಹಂತದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಸದರಿ ಯೋಜನೆಯು ಪೂರ್ಣಗೊಂಡ ನಂತರ 110 ಹಳ್ಳಿಗಳ ಎಲ್ಲಾ ಪ್ರದೇಶಗಳ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. |
| ಇ) | ನೀರಿನ ಬೇಡಿಕೆಯು ಹೆಚ್ಚುತ್ತಿರುವುದರಿಂದ BWSSB ಯು ಯಾವುದಾದರೂ ನೀರಿನ ಮರು ಬಳಕೆ ನೀತಿಯ ಅನುಷ್ಠಾನ ಕಾರ್ಯ ನಿರ್ವಹಿಸುತ್ತಿದೆಯೇ; ಹಾಗಿದ್ದಲ್ಲಿ. ಇದನ್ನು ಅನುಷ್ಠಾನಗೊಳಿಸುತ್ತಿರುವ ಬಡಾವಣೆಗಳು / ಪ್ರದೇಶಗಳು ಯಾವುವು; | ಬೆಂಗಳೂರು ನಗರಕ್ಕೆ ದಿನಂಪ್ರತಿ ಕಾವೇರಿ ಮೂಲದಿಂದ ಸುಮಾರು 1450.00 ದಶಲಕ್ಷ ಲೀಟರ್ ರಷ್ಟು ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿರುತ್ತದೆ. ಪ್ರಸ್ತುತ ಬೆಂಗಳೂರು ನಗರದಲ್ಲಿ ಬೆಂಗಳೂರು ಜಲಮಂಡಳಿಯ ವತಿಯಿಂದ ಸುಮಾರು 10.64 ಲಕ್ಷ ನೀರಿನ ಸಂಪರ್ಕಗಳಿಗೆ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.<br><br>ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ಬೆಂಗಳೂರು ಜಲಮಂಡಳಿ ವತಿಯಿಂದ ಕಾವೇರಿ 5ನೇ ಹಂತದ ಯೋಜನೆಯನ್ನು ಕೈಗೆತ್ತಿಕೊಂಡು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಸದರಿ ಯೋಜನೆ ಪೂರ್ಣಗೊಂಡ ನಂತರ 110 ಹಳ್ಳಿಗಳ ವ್ಯಾಪ್ತಿಗೆ 775.00 ದಶಲಕ್ಷ ಲೀಟರ್ ನೀರನ್ನು ಹೆಚ್ಚುವರಿಯಾಗಿ ಕಾವೇರಿ ಮೂಲದಿಂದ ಸರಬರಾಜು ಮಾಡಲಾಗುವುದು.<br><br>ಮಳೆ ನೀರಿನ ಸಂಗ್ರಹಣೆ ಹಾಗೂ ಮರುಬಳಕೆಗಾಗಿ ಮತ್ತು ಅಂತರ್ಜಲ ವೃದ್ಧಿಸಲು ಬೆಂಗಳೂರು ಜಲಮಂಡಳಿ ವಿನಿಯಮ 72(ಎ)ಕ್ಕೆ ದಿನಾಂಕ: 06.05.2020 ರಂದು ಈ ಕೆಳಕಂಡಂತೆ ತಿದ್ದುಪಡಿಯನ್ನು ತರಲಾಗಿದೆ.<br><br>1) ಕಟ್ಟಡದ ತಾರಸಿ / ಮೇಲ್ಛಾವಣಿಯ ಮೇಲೆ ಬೀಳುವ ಮಳೆ ನೀರು ಸಂಗ್ರಹಣೆಗಾಗಿ ಹಾಗೂ ಮರು ಬಳಕೆಗಾಗಿ ಪ್ರತಿ ಚದರ ಮೀಟರ್‌ಗೆ 20 ಲೀಟರ್‌ನಿಂದ 60 ಲೀಟರ್‌ಗೆ ಹಾಗೂ |

<table>
<tr><td></td><td></td><td>2) ನಡೆದಾಡುವ ಮತ್ತು ಬಯಲು ಪ್ರದೇಶದಲ್ಲಿ ಪ್ರತಿ ಚದರ ಮೀಟರ್‌ಗೆ ಅಂತರ್ಜಲ ವೃದ್ಧಿಸಲು ಮಳೆ ನೀರು ಇಂಗು ಗುಂಡಿಗಳ ನಿರ್ಮಾಣಕ್ಕೆ 10 ಲೀಟರ್‌ನಿಂದ 30 ಲೀಟರ್‌ಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ.<br><br>2016ರ ನಂತರ ಹೊಸದಾಗಿ ನಿರ್ಮಿಸಿರುವ ಬಹುಮಹಡಿ ಕಟ್ಟಡಗಳಲ್ಲಿ 20 ಮತ್ತು ಮೇಲ್ಪಟ್ಟು ಇರುವ ವಸತಿ ಸಂಕೀರ್ಣಗಳಿಗೆ ಹಾಗೂ 2,000 ಚದರ ಮೀಟರ್‌ಗಿಂತ ಮೇಲ್ಪಟ್ಟ ನಿರ್ಮಾಣ ಪ್ರದೇಶದ ಗೃಹ / ಗೃಹೇತರ ಕಟ್ಟಡಗಳಿಗೆ ತ್ಯಾಜ್ಯ ನೀರು ಸಂಸ್ಕರಣ ಘಟಕ ಅಳವಡಿಸುವುದು ಕಡ್ಡಾಯಗೊಳಿಸಲಾಗಿದೆ. ಸಂಸ್ಕರಿಸಿದ ನೀರನ್ನು (Non-Potable) ಉಪಯೋಗಕ್ಕಾಗಿ ಕಟ್ಟಡದ ಆವರಣದಲ್ಲಿ ಬಳಸಲಾಗುತ್ತಿರುತ್ತದೆ ಮತ್ತು ಇದರಿಂದ ಕಾವೇರಿ ನೀರಿನ ಬಳಕೆ ಪ್ರಮಾಣದ ಮೇಲೆ ಒತ್ತಡವನ್ನು ಕಡಿಮೆಗೊಳಿಸಲಾಗುತ್ತಿರುತ್ತದೆ.<br><br>ಮುಂದುವರೆದು, ನೀರಿನ ಭವಣೆ ಇರುವ ಪ್ರದೇಶಗಳಿಗೆ ಬೆಂಗಳೂರು ಜಲಮಂಡಳಿಯ ವ್ಯಾಪ್ತಿಯಲ್ಲಿರುವ ಕೊಳವೆ ಬಾವಿಗಳ ಮುಖಾಂತರ ಹೆಚ್ಚುವರಿಯಾಗಿ ನೀರನ್ನು ಸರಬರಾಜು ಮಾಡಲಾಗುತ್ತಿರುತ್ತದೆ. ಅಲ್ಲದೆ, ಬೆಂಗಳೂರು ಜಲಮಂಡಳಿಯ ಸುಪರ್ಧಿನಲ್ಲಿ ಒಟ್ಟು 68 ನೀರಿನ ಟ್ಯಾಂಕರ್‌ಗಳಿದ್ದು, ನೀರಿನ ಭವಣೆ ಇರುವ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದು.</td></tr>
<tr><td>ಈ)</td><td>BWSSB ಯ ಪ್ರಸ್ತುತ ಒಟ್ಟಾರೆ ವಾರ್ಷಿಕ ಆದಾಯ ಮತ್ತು ವೆಚ್ಚ ಹಾಗೂ ಸಾಲದ ವಿವರಗಳನ್ನು ಒದಗಿಸುವುದು?</td><td>ಬೆಂಗಳೂರು ಜಲ ಮಂಡಳಿಯ ಕಳೆದ ಮೂರು ವರ್ಷಗಳ ವಾರ್ಷಿಕ ಆದಾಯ ಮತ್ತು ವೆಚ್ಚ ಹಾಗೂ ಸಾಲದ ವಿವರಗಳು ಕೆಳಗಿನಂತಿವೆ:<br><br>(ರೂ.ಲಕ್ಷಗಳಲ್ಲಿ)<br><br>
<table>
<tr><th>ವಿವರಗಳು</th><th>2019-20</th><th>2020-21</th><th>2021-22</th></tr>
<tr><td>ಒಟ್ಟಾರೆ ಆದಾಯ</td><td>170967.35</td><td>188325.23</td><td>197741.49</td></tr>
<tr><td>ಒಟ್ಟಾರೆ ವೆಚ್ಚ</td><td>201476.03</td><td>203293.69</td><td>206934.08</td></tr>
<tr><td>ನಿವ್ವಳ ಹೆಚ್ಚುವರಿ/ ಕೊರತೆ</td><td>-30508.68</td><td>-14968.46</td><td>-9192.59</td></tr>
</table>
<br>
<table>
<tr><th>ವಿವರಗಳು</th><th>2019-20</th><th>2020-21</th><th>2021-22</th></tr>
<tr><td>ಸಾಲದ ವಿವರಗಳು</td><td>591590.05</td><td>662314.55</td><td>793140.55</td></tr>
</table>
</td></tr>
</table>

**ಸಂಖ್ಯೆ: ನಅಇ 08 ಎಂಎನ್‌ಐ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

# ಅನುಬಂಧ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 110 ಹಳ್ಳಿಗಳ ಪೈಕಿ 51 ಹಳ್ಳಿಗಳಿಗೆ ಅಧಿಸೂಚನೆ ಹೊರಡಿಸಿರುವ ವಿವರ

| ಕ್ರ ಸಂ | ಅಧಿಸೂಚನೆ ಹೊರಡಿಸಿರುವ ಹಳ್ಳಿಗಳ ಹೆಸರು | ಕ್ರ ಸಂ | ಅಧಿಸೂಚನೆ ಹೊರಡಿಸಿರುವ ಹಳ್ಳಿಗಳ ಹೆಸರು |
|---|---|---|---|
| 1 | ಹೇರೋಹಳ್ಳಿ | 27 | ಚಿಕ್ಕಸಂದ್ರ |
| 2 | ಸೊಣ್ಣೇನಹಳ್ಳಿ | 28 | ಸಿಡೇದಹಳ್ಳಿ |
| 3 | ಹೊರಮಾವು (ಭಾಗಶಃ) | 29 | ಅಂದ್ರಹಳ್ಳಿ |
| 4 | ದಾಸರಹಳ್ಳಿ (ಭಾಗಶಃ) | 30 | ಕರಿಓಬನಹಳ್ಳಿ |
| 5 | ಚಲ್ಕೆರೆ (ಭಾಗಶಃ) | 31 | ಆರೇಹಳ್ಳಿ (ಭಾಗಶಃ) |
| 6 | ಕೂಡ್ಲು (ಭಾಗಶಃ) | 32 | ವಸಂತಪುರ (ಭಾಗಶಃ) |
| 7 | ನಾಗನಾಥಪುರ (ಭಾಗಶಃ) | 33 | ಗಿಡದಕೋನೇನಹಳ್ಳಿ (ಭಾಗಶಃ) |
| 8 | ಪರಪ್ಪನ ಅಗ್ರಹಾರ (ಭಾಗಶಃ) | 34 | ನಾಗೊಂಡನಹಳ್ಳಿ |
| 9 | ಗಾಣಕಲ್ಲು (ಭಾಗಶಃ) | 35 | ಕಾಳೇನ ಅಗ್ರಹಾರ |
| 10 | ತೂಬರಹಳ್ಳಿ | 36 | ಜುನ್ನಸಂದ್ರ |
| 11 | ಸಿದ್ದಾಪುರ (ಭಾಗಶಃ) | 37 | ಕಸವನಹಳ್ಳಿ |
| 12 | ಚಿಕ್ಕ ಬೆಟ್ಟಹಳ್ಳಿ (ಭಾಗಶಃ) | 38 | ಅಂಬಲಿಪುರ |
| 13 | ಬೇಗೂರು | 39 | ದೊಡ್ಡಬೆಟ್ಟಹಳ್ಳಿ |
| 14 | ಹರಳೂರು (ಭಾಗಶಃ) | 40 | ಉಲ್ಲಾಳು |
| 15 | ಅಬ್ಬಿಗೆರೆ | 41 | ಆಲಹಳ್ಳಿ |
| 16 | ಮೇಡರಹಳ್ಳಿ | 42 | ಅಂಜನಾಪುರ |
| 17 | ಶೆಟ್ಟಿಹಳ್ಳಿ | 43 | ಬೆಳ್ಳಂದೂರು |
| 18 | ಉತ್ತರಹಳ್ಳಿ (ಭಾಗಶಃ) | 44 | ಕೈಕೊಂಡ್ರಹಳ್ಳಿ |
| 19 | ಎಲ್ಲೇನಹಳ್ಳಿ | 45 | ಲಿಂಗಧೀರನಹಳ್ಳಿ ಬಿ |
| 20 | ದೊಡ್ಡಕಲ್ಲಸಂದ್ರ | 46 | ಹೊಸಹಳ್ಳಿ |
| 21 | ರಘುವನಹಳ್ಳಿ | 47 | ಪದ್ದರಪಾಳ್ಯ (ಭಾಗಶಃ) |
| 22 | ರಾಮಗೊಂಡನಹಳ್ಳಿ | 48 | ಗುಬ್ಬಲಾಳು (ಭಾಗಶಃ) |
| 23 | ರಾಚೇನಹಳ್ಳಿ | 49 | ಚಿಕ್ಕತೋಗೂರು |
| 24 | ಗೊಲ್ಲಹಳ್ಳಿ | 50 | ದೊಡತೋಗೂರು |
| 25 | ತಿಪ್ಪಸಂದ್ರ | 51 | ಬಸಾಪುರ |
| 26 | ಹೆಮ್ಮಿಗೆಪುರ (ಭಾಗಶಃ) | | |

Chief Engineer (P)
Bangalore Water Supply
and Sewerage Board
Bangalore - 560 009

# ಕರ್ನಾಟಕ ವಿಧಾನ ಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 351 |
| ಸದಸ್ಯರ ಹೆಸರು | : | ಶ್ರೀ ರಘುಪತಿ ಭಟ್ ಕೆ. (ಉಡುಪಿ) |
| ಉತ್ತರಿಸುವ ದಿನಾಂಕ | : | 14.02.2023. |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಯವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮ ಪಂಚಾಯತ್ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಲರ್ಕ್/ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ "ಸಿ" ದರ್ಜೆಯ ಹುದ್ದೆಯನ್ನು ಮತ್ತು ಪರಿಚಾರಕರು, ಕ್ಲೀನರ್ಸ್, ವಾಟರ್ ಮೆನ್ / ಪಂಪು ಚಾಲಕ ಮುಂತಾದ ವೃಂದಗಳಿಗೆ 'ಡಿ' ದರ್ಜೆಯ ಹುದ್ದೆಯನ್ನು ನೀಡಿ ನಗರ ಸಭೆ ಮತ್ತು ಪಟ್ಟಣ ಪಂಚಾಯತ್ ನಂತೆ ವೇತನ ಶ್ರೇಣಿಯನ್ನು ನಿಗಧಿಪಡಿಸಿರುವುದರೊಂದಗೆ ಸೇವಾ ಸೌಲಭ್ಯವನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಯಾವ ಹಂತದಲ್ಲಿದೆ; ಸದರಿ ನೌಕರರಿಗೆ ಸೇವಾ ಭದ್ರತೆ ಹಾಗೂ ಸೇವಾ ಸೌಲಭ್ಯವನ್ನು ಇತರೆ ಸರ್ಕಾರಿ ನೌಕರರಂತೆ ನೀಡಲು ಸರ್ಕಾರದ ನಿಲುವೇನು; | ಗ್ರಾಮ ಪಂಚಾಯತಿ ನೌಕರರು ಸರ್ಕಾರಿ ನೌಕರರಾಗಿರುವುದಿಲ್ಲ. ಸದರಿ ನೌಕರರು ಸ್ಥಳೀಯ ಪ್ರಾಧಿಕಾರವಾದ ಗ್ರಾಮ ಪಂಚಾಯತಿಯ ನೌಕರರಾಗಿದ್ದು, "ಸಿ" ಮತ್ತು "ಡಿ" ದರ್ಜೆ ನೌಕರರೆಂದು ಪರಿಗಣಿಸಿ ವೇತನ ಶ್ರೇಣಿ ನಿಗಧಿಪಡಿಸಲು ಆಡಳಿತಾತ್ಮಕವಾಗಿ ಸಾಧ್ಯವಾಗುವುದಿಲ್ಲ.<br><br>ಗ್ರಾಮ ಪಂಚಾಯತಿ ನೌಕರರಿಗೆ ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ನಿಗಧಿಪಡಿಸುವ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆಯನ್ನು ಗ್ರಾಮ ಪಂಚಾಯತಿಯು ಪಾವತಿಸುತ್ತಿದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016, ದಿನಾಂಕ:29-09-2020 ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳು) ನಿಯಮಗಳು, 2020 ಅನ್ನು ರೂಪಿಸಲಾಗಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 112 ಮತ್ತು 113 ರಂತೆ ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವರ್ಗದ ಸ್ವರೂಪ, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳನ್ನು ನಿರ್ದಿಷ್ಟಪಡಿಸಲಾಗಿದೆ.<br><br>ಅದರಂತೆ, ಗ್ರಾಮ ಪಂಚಾಯತ್ ಸಿಬ್ಬಂದಿಗೆ ವಾರ್ಷಿಕವಾಗಿ 10 ದಿನಗಳ ಸಾಂದರ್ಭಿಕ ರಜೆ, 2 ದಿನಗಳ ನಿರ್ಬಂಧಿತ ರಜೆ, ವಾರ್ಷಿಕವಾಗಿ 30 ದಿನಗಳ ಗಳಿಕೆ ರಜೆ, ಮಹಿಳಾ ನೌಕರರಿಗೆ, 180 ದಿನಗಳ ಪ್ರಸೂತಿ ರಜೆ, ಪುರುಷ ನೌಕರರಿಗೆ 15 ದಿನಗಳ ಪಿತೃತ್ವ ರಜೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>ಸೇವೆಯಿಂದ ನಿವೃತ್ತಿಯಾಗುವ ಸಿಬ್ಬಂದಿಗೆ ಅಥವಾ ಸೇವೆಯಲ್ಲಿ ಮರಣ ಹೊಂದಿದ ಸಿಬ್ಬಂದಿಯ ನ್ಯಾಯಬದ್ಧ ಅವಲಂಬಿತರಿಗೆ ಅವರುಗಳು ಸಲ್ಲಿಸಿದ ಸೇವಾ ಅವಧಿಯ ಆಧಾರದ ಮೇಲೆ ಒಂದು ವರ್ಷದ ಸೇವೆಗೆ 15 ದಿನಗಳ ವೇತನದಂತೆ ಒಟ್ಟು 20 ತಿಂಗಳ ವೇತನ ಮೀರದಂತೆ ನಿವೃತ್ತಿ ಹಾಗೂ ಮರಣೋತ್ತರ ಉಪದಾನಗಳನ್ನು ನೀಡಲಾಗುತ್ತಿದೆ.<br><br>ಗ್ರಾಮ ಪಂಚಾಯತಿ ನೌಕರನು ಸೇವೆಯಲ್ಲಿರುವಾಗಲೇ ಮರಣ ಹೊಂದಿದಲ್ಲಿ ಅವರ ಅವಲಂಬಿತರು ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಲು ಅರ್ಹರಿದ್ದಲ್ಲಿ, ಗ್ರಾಮ ಪಂಚಾಯತಿಗಳಲ್ಲಿ ಖಾಲಿ |

| | | |
|---|---|---|
| | | ಇರುವ ಹುದ್ದೆಗೆ ಬೇರೆ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವುದರ ಬದಲು, ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಅವರ ಅವಲಂಬಿತರನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಯನ್ನು ಪಡೆದು ಗ್ರಾಮ ಪಂಚಾಯತಿಗಳು ಅನುಕಂಪದ ಆಧಾರದ ಮೇಲೆ ನೇಮಿಸಲು ಅಗತ್ಯ ಕ್ರಮ ವಹಿಸುವಂತೆ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ನಿರ್ದೇಶನ ನೀಡಿದೆ.<br><br>ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದವರಿಗೆ ಅನಿರೀಕ್ಷಿತ ಸಂದರ್ಭಗಳಲ್ಲಿ ಅಪಘಾತಗಳಾಧಲ್ಲಿ ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ಆರ್ಥಿಕ ಭದ್ರತೆ ಒದಗಿಸುವ ಹಿತದೃಷ್ಟಿಯಿಂದ ಈ ಕೆಳಕಂಡ ಪ್ರಧಾನ ಮಂತ್ರಿಯವರ "ಜನ್‌ಧನ್" ಯೋಜನೆಯಡಿಯ ವಿಮಾ ಪಾಲಿಸಿಗಳನ್ನು ಕಡ್ಡಾಯವಾಗಿ ಮಾಡಿಸಲು ಮತ್ತು ಸಂಬಂಧಿಸಿದ ಸಿಬ್ಬಂದಿಗಳ ವೇತನದ ಬ್ಯಾಂಕ್ ಖಾತೆಗೆ ಲಿಂಕ್ ಮಾಡಿಸಿ, ವಾರ್ಷಿಕವಾಗಿ ಕಟಾವಣೆ ಮಾಡಲು ಅಗತ್ಯ ಕ್ರಮಕೈಗೊಳ್ಳಲು ಗ್ರಾಮ ಪಂಚಾಯಿತಿಗಳಿಗೆ ತಿಳಿಸಲಾಗಿದೆ.<br><br>1) ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ<br>2) ಪ್ರಧಾನ ಮಂತ್ರಿ ಸುರಕ್ಷಾ ಜ್ಯೋತಿ ಭೀಮಾ ಯೋಜನೆ<br>3) ಭಾರತೀಯ ಸ್ಟೇಟ್ ಬ್ಯಾಂಕ್‌ನ ಗ್ರೂಪ್ ಫರ್ಸನಲ್ ಆಕ್ಸಿಡೆಂಟ್ ಇನ್‌ಶ್ಯೂರೆನ್ಸ್ |
| (ಆ) | ಸರ್ಕಾರದ ಆದೇಶ ದಿನಾಂಕ: 29-09-2020 ರ ಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ನೌಕರರಿಗೆ ವಿದ್ಯಾರ್ಹತೆ ಮತ್ತು ವಯೋಮಿತಿಯನ್ನು ಪರಿಗಣಿಸದೆ ಜಿಲ್ಲಾ ಪಂಚಾಯತ್‌ನಿಂದ ಅನುಮೋದನೆಗೊಳಿಸಿ ನೇಮಕ ಮಾಡುವ ಬಗ್ಗೆ ಇರುವ ತೊಡಕುಗಳೇನು? (ವಿವರ ನೀಡುವುದು) | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 112 ರಡಿ ಸರ್ಕಾರವು ಆದೇಶದ ಮೂಲಕ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ, ನೇಮಕಾತಿ ವಿಧಾನ ಮತ್ತು ವೇತನ ಶ್ರೇಣಿ ನಿಗಧಿಪಡಿಸಿದ್ದು, ಅದರಂತೆ ನಿಗಧಿಪಡಿಸಿರುವ ವಿದ್ಯಾರ್ಹತೆ ಮತ್ತು ವಯೋಮಿತಿಗೆ ಅನುಗುಣವಾಗಿ ಮಂಜೂರಾದ ಹುದ್ದೆಗಳಿಗೆ ಗ್ರಾಮ ಪಂಚಾಯತಿಯು ಪ್ರಕರಣ 113 ರಂತೆ ನೇಮಕಾತಿ ಮಾಡಿಕೊಂಡು, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆಯಬೇಕಾಗಿರುತ್ತದೆ.<br><br>ಮೇಲ್ಕಂಡಂತೆ ಉಲ್ಲಂಘನೆ ಮಾಡಿ ನೇಮಕಾತಿ ಮಾಡಿಕೊಂಡಿರುವ ಪ್ರಕರಣಗಳಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ನೀಡಲು ಅವಕಾಶವಿರುವುದಿಲ್ಲ. |

ಸಂಖ್ಯೆ: ಗ್ರಾಅಪ 86 ಗ್ರಾಪಂಅ 2023 (ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.

## ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 352
2. ಉತ್ತರಿಸುವ ದಿನಾಂಕ : 14.02.2023
3. ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ.
4. ಉತ್ತರಿಸಬೇಕಾದ ಸಚಿವರು : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
